ಕರ್ನಾಟಕ ವಿಧಾನಸಭೆ

ಸೋಮವಾರ 23ನೇ ಡಿಸೆಂಬರ್ 2002ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆ ಸಮಾವೇಶಗೊಂಡಿತು.

ಅಧ್ಯಕ್ಷರು (ಎಂ.ವಿ. ವೆಂಕಟಪ್ಪ) ರವರು ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆಗಳು

ಮಾಜಿ ಸಚಿವ ಶ್ರೀ ಹೆಚ್. ನಾಗಪ್ಪ ಮತ್ತು ಇತರರ ನಿಧನದ ಬಗ್ಗೆ

ಅಧ್ಯಕ್ಷರು : ಇಂದಿನ ಕಾರ್ಯಕಲಾಪಗಳ ಪಟ್ಟಿ ಪ್ರಕಾರ ಸಂತಾಪ ಸೂಚನೆಗಳನ್ನು ಕೈಗೆತ್ತಿಕೊಳ್ಳೋಣ. ಮಾಜಿ ಸಚಿವರಾಗಿದ್ದ ಶ್ರೀ ಹೆಚ್. ನಾಗಪ್ಪ ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಎ.ಕೆ. ಅನಂತಕೃಷ್ಣ ಶ್ರೀ ಜೆ.ಡಿ. ಸೋಮಪ್ಪ, ಶ್ರೀ ಜಿ. ಶಿವಪ್ಪ, ಶ್ರೀ ಮೊಹಸೀನ್ ಕಮಾಲ್, ಶ್ರೀ ಡಿ. ಪುಟ್ಟೇಗೌಡ, ರಾಜ್ಯ ಸಭಾ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಎನ್. ಅನ್ನಪೂರ್ಣದೇವಿ, ಹಿರಿಯ ಪತ್ರಕರ್ತರಾಗಿದ್ದ ಶ್ರೀಯುತ. ಕೆ. ಶಾಮರಾವ್ ಮತ್ತು ರೈಲು ದುರಂತಗಳ ಬಗ್ಗೆ ಇವತ್ತು ಸಂತಾಪ ಸೂಚನೆಗಳು ಇವೆ.

ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನದೊಂದು ಮನವಿ ಇದೆ. ಹೆಚ್. ನಾಗಪ್ಪನವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮವನ್ನೇನು ತಾವು ಇಟ್ಟುಕೊಂಡಿದ್ದೀರಿ, ಅದು ದಯಮಾಡಿ ಬೇಡಿ ಎಂದು ನಾನು ತಮ್ಮಲ್ಲಿ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಅದರ ಬದಲಾಗಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕೆಂದರೆ, ದಯಮಾಡಿ ಸರ್ಕಾರ ಇಮ್ಮಿಡಿಯಟ್ ಆಗಿ ನಾಗಪ್ಪನವರ ಹತ್ಯೆ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕು. ಹಾಗೆ ಮಾಡಿದಲ್ಲಿ ಮಾತ್ರ ಮಾನ್ಯ ನಾಗಪ್ಪನವರ ಆತ್ಮಕ್ಕೆ ಶಾಂತಿ ಸಿಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೇ, ಚರ್ಚೆ ಮಾಡಿ ಆಮೇಲೆ ಸಂತಾಪ ಮಾಡೋಣ. ಚರ್ಚೆಯಾಗದೇ ಸುಮ್ಮನೇ ಕಣ್ಣೊರೆಸುವ ಕೆಲಸ ಮಾಡುವುದು ಬೇಡ.

ಅಧ್ಯಕ್ಷರು : ಅದನ್ನು ನಾಳೆ ಮಾಡೋಣ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ನಾಗಪ್ಪನವರ ಹತ್ಯೆ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕೆಂದು ಒತ್ತಾಯಿಸಿ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ. ಗುರುಸ್ವಾಮಿಯವರು ಮಾಜಿ ಸಚಿವರಾದ ಹೆಚ್. ನಾಗಪ್ಪನವರ ಹತ್ಯೆ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ಒಪ್ಪಿಸಬೇಕೆಂದು ಒತ್ತಾಯಿಸಿ ಸದನದ ಬಾವಿಯಲ್ಲಿ ಧರಣಿ ನಿರತರಾದರು)

ಅಧ್ಯಕ್ಷರು : ಮಾಜಿ ಸಚಿವರಾಗಿದ್ದ ಶ್ರೀ ಹೆಚ್. ನಾಗಪ್ಪ, ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಎ.ಕೆ. ಅನಂತಕೃಷ್ಣ, ಶ್ರೀ ಜೆ.ಡಿ. ಸೋಮಪ್ಪ, ಶ್ರೀ ಜಿ. ಶಿವಪ್ಪ, ಶ್ರೀ ಮೊಹಸೀನ್ ಕಮಾಲ್, ಶ್ರೀ ಡಿ. ಪುಟ್ಟೇಗೌಡ ಹಾಗೂ ರಾಜ್ಯ ಸಭಾ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಎನ್. ಅನ್ನಪೂರ್ಣದೇವಿ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ವಿಧಾನ ಸಭೆಯ ಮಾಜಿ ಸಚಿವರಾಗಿದ್ದ ಶ್ರೀ ಹೆಚ್. ನಾಗಪ್ಪ ರವರು 1937 ನೇ ಇಸವಿ ಮಾರ್ಚ್ ತಿಂಗಳಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆಯಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾದ ಶ್ರೀಯುತರು ಸಾಮಾಜಿಕ ಸೇವಕರಾಗಿದ್ದರು. ಶ್ರೀಯುತರು ಹನೂರು ಕ್ಷೇತ್ರದಿಂದ ನಾಲ್ಕನೇ ವಿಧಾನ ಸಭೆಗೆ ಹಾಗೂ 10 ನೇ ವಿಧಾನ ಸಭೆಗೆ ಆಯ್ಕೆಯಾಗಿ ಶ್ರೀ ಜೆ.ಹೆಚ್. ಪಟೇಲ್ ಅವರ ಸಚಿವ ಸಂಪುಟದಲ್ಲಿ ಕೃಷಿ ಮಾರುಕಟ್ಟೆ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ದಿನಾಂಕ 25 ನೇ ಆಗಸ್ಟ್ 2002 ರಂದು ನರಹಂತಕ ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಿಸಲ್ಪಟ್ಟು 106 ದಿನಗಳ ಕಾಲ ಒತ್ತೆ ಸೆರೆಯಲ್ಲಿದ್ದ ಮಾಜಿ ಸಚಿವ ನಾಗಪ್ಪ ಅವರು ದಿನಾಂಕ 9 ನೇ ಡಿಸೆಂಬರ್ 2002 ರಂದು ಕೊಳ್ಳೇಗಾಲದ ಚಂಗಡಿ ಅರಣ್ಯ ಪ್ರದೇಶದಲ್ಲಿಯೇ ದುರ್ಮರಣಕ್ಕೀಡಾದ ವಿಚಾರ ಈ ನಾಡಿನ ಜನರ ಮನಕೆದಕಿದೆ, ಆಘಾತವನ್ನುಂಟು ಮಾಡಿದೆ.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎ.ಕೆ. ಅನಂತಕೃಷ್ಣ ಅವರು ದಿನಾಂಕ 6 ನೇ ಆಗಸ್ಟ್ 1923 ರಂದು ಕೋಲಾರ ಪಟ್ಟಣದಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ವ್ಯಾಪಾರಸ್ಥರಾದ ಶ್ರೀಯುತರು ನಾಗರೀಕ, ಸಾಮಾಜಿಕ ಹಾಗೂ ಅಂತರರಾಷ್ಟ್ರೀಯ ಸಂಬಂಧಗಳ ಚಟುವಟಿಕೆ ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ತೀವ್ರ ಆಸಕ್ತಿ ಹೊಂದಿದವರಾಗಿದ್ದು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. 1973 ರಲ್ಲಿ ಬೆಂಗಳೂರು ನಗರ ಮೇಯರ್ ಆಗಿ ಆಯ್ಕೆಯಾಗಿ, ಬೆಂಗಳೂರು ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿ ಜನಪ್ರಿಯ ಮೇಯರ್ ಎಂದೇ ಖ್ಯಾತರಾಗಿದ್ದ ಶ್ರೀಯುತರು ಶಿವಾಜಿನಗರ ಕ್ಷೇತ್ರದಿಂದ 9 ನೇ ವಿಧಾನ ಸಭೆಗೆ ಆಯ್ಕೆಯಾಗಿ ಪ್ರದೇಶ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 26-10-2002 ರಂದು ನಿಧನ ಹೊಂದಿದರು.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಯುತ ಜೆ.ಡಿ. ಸೋಮಪ್ಪನವರು 1933 ನೇ ಇಸವಿ ಫೆಬ್ರವರಿ 25 ರಂದು ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸಕಲೇಶಪುರ ತಾಲ್ಲೂಕಿನಲ್ಲಿ ವೀರಶೈವ ಜನಾಂಗದ ಪ್ರಮುಖರಾಗಿದ್ದ ಶ್ರೀಯುತರು ಹತ್ತು ವರ್ಷಗಳ ಕಾಲ ಸಕಲೇಶಪುರ ಪುರಸಭೆಯ ಅಧ್ಯಕ್ಷರಾಗಿ, 3 ಬಾರಿ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾಗಿ, ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಮಿತಿಯ ಅಧ್ಯಕ್ಷರಾಗಿ ಹಾಗೂ ಸ್ವಾತಂತ್ರ್ಯ ಸಮರದ ಕಾಲದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಸಕಲೇಶಪುರ ಕ್ಷೇತ್ರದಿಂದ ಆರನೇ ಹಾಗೂ ಏಳನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 29-10-2002 ರಂದು ನಿಧನ ಹೊಂದಿದರು.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ. ಶಿವಪ್ಪನವರು ಚಿತ್ರದುರ್ಗದ ಭೀಮಸಮುದ್ರದಲ್ಲಿ ಕೃಷಿಕ ಮನೆತನದಲ್ಲಿ ಜನಿಸಿ, ಕಾನೂನು ಪದವೀಧರರಾಗಿದ್ದರು. 1949 ರಲ್ಲಿ ಚಿತ್ರದುರ್ಗದಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದ ಶ್ರೀಯುತರು, 1950 ರಲ್ಲಿ ಚಿತ್ರದುರ್ಗದ ಟಿ.ಸಿ.ಸಿ ಯ ಅಧ್ಯಕ್ಷರಾಗಿ, 1952 ರಿಂದ 1956 ರವರೆಗೆ ಮೈಸೂರು ವಿಶ್ವವಿದ್ಯಾಲಯದ ಸೆನೆಟ್

ಮತ್ತು ಅಕಾಡಮಿಕ್ ಕೌನ್ಸಿಲ್‌ನ ಸದಸ್ಯರಾಗಿ, ಚಿತ್ರದುರ್ಗದ ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಯ ಅಧ್ಯಕ್ಷರಾಗಿ ಹಾಗೂ ಚಿತ್ರದುರ್ಗ ಜಿಲ್ಲಾ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಒಂದನೇ ಹಾಗೂ ಎರಡನೇ ಬಾರಿಗೆ ಮೈಸೂರು ವಿಧಾನ ಸಭೆಗೆ ಚಿತ್ರದುರ್ಗ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 30-10-2002 ರಂದು ನಿಧನ ಹೊಂದಿದರು.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮೊಹಸೀನ್ ಕಮಾಲ್, ಅವರು ದಿನಾಂಕ 1 ನೇ ಫೆಬ್ರವರಿ 1942 ರಂದು ಬೀದರ್ ಜಿಲ್ಲೆಯಲ್ಲಿ ಜನಿಸಿ ವೃತ್ತಿಯಲ್ಲಿ ಪತ್ರಕರ್ತರಾಗಿದ್ದರು. ಶ್ರೀಯುತರು 1982 ರ ಉಪ ಚುನಾವಣೆಯಲ್ಲಿ ಬೀದರ್ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿ 10 ತಿಂಗಳ ಕಾಲ ಶಾಸಕರಾಗಿ, ತದನಂತರ 1992 ರಿಂದ 1998 ರ ವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 7-11-2002 ರಂದು ನಿಧನ ಹೊಂದಿದರು.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ. ಪುಟ್ಟೇಗೌಡ, ಅವರು ರೈತ ಮನೆತನದಲ್ಲಿ ಜನಿಸಿ, ಮೂರು ಬಾರಿ ಅರಕಲಗೂಡು ಪುರಸಭಾ ಸದಸ್ಯರಾಗಿ 20 ವರ್ಷ ಕೋ ಆಪರೇಟಿವ್ ಸೊಸೈಟಿಯ ಸದಸ್ಯರಾಗಿ ಹಾಗೂ ಫಸ್ಟ್ (First) ಸರ್ಕಲ್ ಸೊಸೈಟಿಯ ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಅರಕಲಗೂಡು ವಿಧಾನ ಸಭಾ ಕ್ಷೇತ್ರದಿಂದ ಎರಡನೇ ಮೈಸೂರು ವಿಧಾನ ಸಭೆಗೆ ಸ್ವತಂತ್ರ ಪಕ್ಷದಿಂದ ಆಯ್ಕೆಯಾಗಿ ಕಾರ್ಯ ನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 23-11-2002 ರಂದು ನಿಧನ ಹೊಂದಿದರು.

ಮಾಜಿ ರಾಜ್ಯ ಸಭಾ ಸದಸ್ಯರಾದ ಶ್ರೀಮತಿ ಎನ್. ಅನ್ನಪೂರ್ಣದೇವಿ ಅವರು 1914 ರಲ್ಲಿ ಗುಂಟೂರಿನಲ್ಲಿ ಜನಿಸಿ, ಸಂಸ್ಕೃತ, ಹಿಂದಿ ಮತ್ತು ತೆಲುಗಿನಲ್ಲಿ ವಿದ್ವತ್‌ನ್ನು ಪಡೆದಿದ್ದರು. 1937 ರಲ್ಲಿ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಸ್ಥಾಪಿಸುವಲ್ಲಿ ಹೋರಾಟ ಮಾಡಿದ್ದರು. ಕಾಂಗ್ರೆಸ್ ಸದಸ್ಯರಾಗಿ, ಹಾಗೂ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದರು. ಶ್ರೀಯುತರು ಏಪ್ರಿಲ್ 1958 ರಲ್ಲಿ ರಾಜ್ಯ ಸಭೆಗೆ ಚುನಾಯಿತರಾಗಿ, ನಂತರ 1964 ನೇ ಏಪ್ರಿಲ್‌ನಲ್ಲಿ ರಾಜ್ಯ ಸಭೆಗೆ ಪುನರಾಯ್ಕೆಯಾಗಿದ್ದರು. ಶ್ರೀಮತಿ ಅನ್ನಪೂರ್ಣದೇವಿ ಅವರು 1987 ರಲ್ಲಿ ಸ್ವಾತಂತ್ರ್ಯ ದಿನಾಚರಣೆಯ 40 ನೇ ವಾರ್ಷಿಕ ಸಮಾರಂಭದ ಸಂದರ್ಭದಲ್ಲಿ ಅಂಕೋಲಾ, ಶಿವಪುರ ವಿದುರಾಶ್ವತ್ಥದಿಂದ ಪವಿತ್ರ ಮಣ್ಣನ್ನು ದಿಲ್ಲಿಗೆ ಕೊಂಡೊಯ್ಯುವ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಶ್ರೀಮತಿ ಅನ್ನಪೂರ್ಣದೇವಿಯವರು ದಿನಾಂಕ 14-11-2002 ರಂದು ನಿಧನ ಹೊಂದಿದರು.

ಹಿರಿಯ ಪತ್ರಕರ್ತರಾಗಿದ್ದ ಶ್ರೀಯುತ ಕೆ. ಶಾಮರಾವ್ ರವರು ಲೋಕಶಿಕ್ಷಣ ಟ್ರಸ್ಟ್‌ನಲ್ಲಿ ವಿವಿಧ ಹೊಣೆಗಾರಿಕೆಗಳನ್ನು ನಿರ್ವಹಿಸಿದ್ದು, ವ್ಯವಸ್ಥಾಪಕ ಸಂಪಾದಕರಾಗಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಕೆಲಸ ನಿರ್ವಹಿಸಿದ್ದರು. ಅವರಿಗೆ ರಾಜ್ಯ ಸರ್ಕಾರದಿಂದ ಪ್ರತಿಷ್ಠಿತ

ಟಿ.ಎಸ್.ಆರ್. ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಲಾಗಿತ್ತು. ಪತ್ರಿಕಾ ರಂಗದಲ್ಲಿ ಭೀಷ್ಮರೆನಿಸಿದ್ದ ಶ್ರೀಯುತರ ನಿಧನದಿಂದ ಸಾರ್ವಜನಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟವುಂಟಾಗಿದೆ.

ಶ್ರೀಯುತರು ದಿನಾಂಕ 12-12-2002 ರಂದು ನಿಧನ ಹೊಂದಿದರು.

ದಿನಾಂಕ 21.12.2002 ರ ಶುಕ್ರವಾರ ಮಧ್ಯರಾತ್ರಿ ಹೈದರಾಬಾದ್ ಕಾಚಿಗುಡ - ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿದ ಪರಿಣಾಮವಾಗಿ 20 ಜನ ಅಮಾಯಕರು ಮೃತಪಟ್ಟು ಸುಮಾರು 100 ಜನರು ಗಾಯಗೊಂಡಿರುವುದು ವಿಷಾದನೀಯವಾಗಿರುತ್ತದೆ.

†ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಕಳೆದ ಹತ್ತಾರು ವರ್ಷಗಳಿಂದ ನಮ್ಮ ರಾಜ್ಯವನ್ನು ಕಾಡುತ್ತಿರತಕ್ಕಂತಹ ಒಂದು ಸಮಸ್ಯೆಯ ಸುಳಿಗೆ ಮತ್ತೊಬ್ಬ ಅಮಾಯಕ ಸ್ನೇಹಿತರು ಬಲಿ ಆಗಿರುವ ಹಿನ್ನೆಲೆಯಲ್ಲಿ ಈ ಸದನ ಸೇರುತ್ತಿದೆ. ಸಾರ್ವಜನಿಕ ಜೀವನದಲ್ಲಿ ತಮ್ಮದೇ ಆದ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿಕೊಂಡಿದ್ದ ಸ್ನೇಹಿತರೊಬ್ಬರ ಅಮಾನುಷ ಹತ್ಯೆಯಾಗಿದೆ. ಆ ಹತ್ಯೆಯಿಂದ ಕನ್ನಡದ ಜನ ಮನದಲ್ಲಿ ತುಂಬಲಾರದ ನಷ್ಟವನ್ನು ನಾವು ಕಾಣಬಹುದಾಗಿದೆ.

(ಸಿ. ಗುರುಸ್ವಾಮಿಯವರು ಬಾವಿಯಲ್ಲಿ ನಿಂತು ಮಾತನಾಡಲು ಪ್ರಾರಂಭಿಸಿದಾಗ)

ಅಧ್ಯಕ್ಷರು : ಗುರುಸ್ವಾಮಿಯವರೇ, ತಾವು ಕಳುಹಿಸಿರುವ ನೋಟಿಸ್ ತಲುಪಿದೆ. ಸಂತಾಪ ಸೂಚನೆ ಮಾಡುವಾಗ ಬೇರೆ ಯಾವುದೇ ರೀತಿಯಲ್ಲಿ ತೊಂದರೆ ಮಾಡಬೇಡಿ. ದಯವಿಟ್ಟು ತಾವು ಸುಮ್ಮನೆ ಇರಬೇಕು. have permitted the Chief Minister to speak. Please keep quite. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವುದಕ್ಕೆ ನಾನು ಆಸ್ಪದ ಕೊಟ್ಟಿದ್ದೇನೆ. ಗುರುಸ್ವಾಮಿಯವರೇ, ದಯವಿಟ್ಟು ತಾವು ಮಧ್ಯೆ ಪ್ರವೇಶಿಸಬೇಡಿ. ಅವರ ಸಂತಾಪ ಸೂಚನೆ ಮುಗಿಯಲಿ, ಬೇರೆ ರೂಪದಲ್ಲಿ ತೆಗೆದುಕೊಳ್ಳೋಣ. ಆನಂತರ ನೀವು ಮಾತನಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ (ಕುದುವನಹಳ್ಳಿ) : ಮಾನ್ಯ ಅಧ್ಯಕ್ಷರೆ, ಅವರ ಮನಸ್ಸು ಒಲಿಸಿ ಕೂರಿಸಿಕೊಳ್ಳಿ. ಏಕೆಂದರೆ ಸಂತಾಪ ಸೂಚನೆ ಆಗಿರುವುದರಿಂದ ಮಾನ್ಯ ಗುರುಸ್ವಾಮಿಯವರೂ ಕೂಡ ಇದನ್ನು ಅರಿತು ದಯವಿಟ್ಟು ಅವರ ಸೀಟಿಯಲ್ಲಿ ಕುಳಿತುಕೊಳ್ಳಲಿ. ಇದು ಸಂತಾಪ ಸೂಚನೆ, ಅದಕ್ಕೆ ಅವಕಾಶಗಳಿವೆ ಅದನ್ನು ಮಾಡೋಣ.

ಶ್ರೀ ಎಸ್.ಎಂ. ಕೃಷ್ಣ : ಒಲಿಸೋಣ.

ಅಧ್ಯಕ್ಷರು : ಸಂತಾಪಸೂಚನೆ ನಡೆಯುವಾಗ ಇದು ಅಭಾಸವಾಗುತ್ತದೆ. ದಯವಿಟ್ಟು ತಾವು ಕುಳಿತುಕೊಳ್ಳಿ. ಶೇಕಡ 99 ಜನ ಸದಸ್ಯರು ಸುಮ್ಮನೆ ಇರುವಾಗ ತಾವು ಒಬ್ಬರೇ ಧರಣಿ ಮಾಡುವುದು ಸರಿಯಲ್ಲ. ನಾಳೆ ಮಾತನಾಡಿ, ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ಐ ಆ್ಯಮ್ ವೆರಿ ಸಾರಿ.

ಶ್ರೀ ಎಸ್.ಎಂ. ಕೃಷ್ಣ : 106 ದಿವಸಗಳ ಕಾಲ ಕಾಡಿನಲ್ಲಿ ತಮ್ಮ ಸಂಸಾರ, ತಮ್ಮನ್ನು ನಂಬಿದ್ದ ಜನ, ತಮ್ಮನ್ನು ಬೆಳೆಸಿದ ಜನ, ಇವರೆಲ್ಲರನ್ನೂ ಬಿಟ್ಟು ಆ ಕಾಡಿನ ದುಷ್ಟರೊಡನೆ ಹೆಣಗಾಡಿ ಇಂದು ನಮ್ಮ ಮಧ್ಯೆ ಇಲ್ಲವಾಗಿದ್ದಾರೆ. ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆಯಲ್ಲಿ

ಜನಿಸಿ ಕೃಷಿ ಪ್ರವರ್ತಕರಾಗಿ ಸಮಾಜದ ಸೇವಕರಾಗಿ ಹನೂರು ಕ್ಷೇತ್ರದಿಂದ ಚುನಾಯಿತರಾಗಿ ಹಿಂದಿನ ಸಚಿವ ಸಂಪುಟದಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಈ ದುರಂತ ನಮ್ಮ ನಿರ್ಧಾರಗಳಲ್ಲಿ ಅಥವಾ ನಾವು ತೆಗೆದುಕೊಳ್ಳಬಹುದಾದ ನಿರ್ಧಾರಗಳಲ್ಲಿ ಉಕ್ಕಿನ ಕಾಠಿಣ್ಯ ಬರಬೇಕಾಗಿದೆ. ನಮ್ಮ ದೇಶದ ಉದ್ದಗಲಕ್ಕೆ ನಾವು ದೃಷ್ಟಿ ಹಾಯಿಸಿ ನೋಡಿದಾಗ ಒಂದಲ್ಲ ಒಂದು ವಿಧ್ವಂಸಕ ಕಾರಣಗಳಿಂದಾಗಿ ಅಮಾಯಕರು ದಿನನಿತ್ಯ ಸಾಯುತ್ತಿದ್ದಾರೆ. ಕಾಶ್ಮೀರದ ಆ ಭಾಗದಿಂದ ಪ್ರಾರಂಭ ಮಾಡಿ ಹಾಗೆಯೇ ಮುಂದುವರಿದಾಗ ಈ ಎಲ್ಲಾ ಬೆಳವಣಿಗೆಗಳಿಗೆ ಕಾರಣ ಏನು ಎನ್ನತಕ್ಕಂಥದ್ದನ್ನು ಯಾರೂ ಸ್ಪಷ್ಟವಾಗಿ ನಮೂದಿಸುವುದಕ್ಕೆ ಸಾಧ್ಯ ಆಗದೇ ಹೋದರೂ ಪ್ರಾಮಾಣಿಕರು, ಯಾವ ವಿಧವಾದ ಸಂಬಂಧವೂ ಇಲ್ಲದಂಥವರು ತಮ್ಮ ಅಸು ನೀಗಿದ್ದಾರೆ, ಪ್ರಾಣವನ್ನು ತೆತ್ತಿದ್ದಾರೆ. ಪ್ರತಿಯೊಂದು ವಿಧ್ವಂಸಕ ಕಾರ್ಯದ ಹಿನ್ನೆಲೆ ಕೂಡ ದ್ವೇಷ, ಈರ್ಷ್ಯೆ ಇವುಗಳೇ ಕಾರಣವಾಗಿವೆ. ಶ್ರೀ ನಾಗಪ್ಪನವರನ್ನು ನಾನು ಬಲ್ಲೆ, ಯಾರಿಗೂ ಕೇಡನ್ನು ಬಯಸದ ಒಬ್ಬ ಪುಣ್ಯಜೀವಿ. ಮಾನ್ಯ ಸದಸ್ಯರಿಗೆ ಈ ಬೆಳವಣಿಗೆ ಬಹುಮಟ್ಟಿಗೆ ದುಗುಡ, ದುಃಖ ಸಂಕಟ ಇವುಗಳನ್ನು ತಂದಿದೆ ಎನ್ನುವುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅಷ್ಟೇ ದುಗುಡ, ದುಃಖ ಸಂಕಟ ಸರ್ಕಾರದಲ್ಲಿ ಕೆಲಸ ಮಾಡಿರತಕ್ಕಂಥ, ಮಾಡುತ್ತಿರತಕ್ಕಂಥ ನಮಗೂ ಉಂಟಾಗಿದೆ ಎನ್ನುವುದರ ಬಗ್ಗೆ ನಾನು ಈ ಸಭೆಯ ವೇದಿಕೆಯನ್ನು ಉಪಯೋಗಿಸಿಕೊಂಡು ಈ ಸಂಕಟದಲ್ಲಿ ಸಹಭಾಗಿಗಳಾಗಿ ಧೈರ್ಯದಿಂದ ಮುಂದಿನ ದಿನಗಳಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ತರಬೇಕಾಗಿದ್ದರೆ ನಾವು ಮಾಡಬೇಕಾಗಿರುವುದು ಒಂದೇ ಒಂದು ಕೆಲಸ. ಆ ಕೆಲಸ ಏನು ಎಂದರೆ, ಯಾರು ಕಳೆದ ಹತ್ತಾರು ವರ್ಷಗಳಿಂದ ನಮ್ಮ ನಾಡಿನಲ್ಲಿ ಒಂದು ಅಬ್‌ನಾರ್ಮಲ್ ಸಿಚ್ಯುಯೇಷನ್ ತಂದೊಡ್ಡಿದ್ದಾನೆ ಅಂಥವನ ಕೊನೆಯನ್ನು ನಾವು ನೋಡಬೇಕಾಗಿದೆ. ಆ ದಿಸೆಯಲ್ಲಿ ನಾವು ಕಾರ್ಯಪ್ರವೃತ್ತರಾಗಿದ್ದೇವೆ ಎನ್ನುವ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿ ಈ ದುರಂತದ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ಅಧಿವೇಶನವನ್ನು ಮುಖ್ಯವಾಗಿ ನಾನು ಕರೆದಿದ್ದೇನೆ. ಆದುದರಿಂದ ಈ ಚರ್ಚೆಯಲ್ಲಿ ಮುಕ್ತವಾದ ರೀತಿಯಲ್ಲಿ ತಮ್ಮ ಪ್ರತಿಪಾದನೆಗಳನ್ನು ಮಾಡುವ ಸರ್ವ ಸ್ವಾತಂತ್ರ್ಯ ಪ್ರತಿಯೊಬ್ಬ ಸದಸ್ಯರಿಗೂ ಇದೆ. ಶ್ರದ್ಧಾಂಜಲಿ ಅರ್ಪಿಸತಕ್ಕಂಥ ಸಂದರ್ಭದಲ್ಲಿ ರಾಜಕೀಯವನ್ನು ಬೆರಸದೆ, ಆ ವಿಚಾರದಲ್ಲಿ ಹೇಳಬಹುದಾದ ಮತ್ತು ಹೇಳಲೇಬೇಕಾಗಿರತಕ್ಕಂಥ ವಿಚಾರಗಳನ್ನು ನಾಳೆ ನಾಡಿದ್ದರಲ್ಲಿ ಹೇಳುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಶ್ರೀ ಅನಂತಕೃಷ್ಣರವರು ಈ ಸಭೆಯ ಮಾಜಿ ಸದಸ್ಯರಾಗಿದ್ದರು. ಬೆಂಗಳೂರು ನಗರದ ಮೇಯರ್ ಆಗಿದ್ದರು. ಕೇವಲ ರಾಜಕೀಯ ಚಟುವಟಿಕೆಗೆ ತಮ್ಮ ಆಸಕ್ತಿಯನ್ನು ಸೀಮಿತ ಮಾಡಿಕೊಳ್ಳದೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. ಅವರು ನನ್ನ ಆತ್ಮೀಯ ಸಹೋದ್ಯೋಗಿಯಾಗಿದ್ದರು. ಸಮಾಜವಾದಿ ಪಕ್ಷವನ್ನು ಕಟ್ಟತಕ್ಕಂಥ ಕಾಲದಲ್ಲಿ ನಾವು ಅವರ ಜೊತೆ ಶ್ರಮಿಸಿ ನಮ್ಮ ಗುರಿಗಳನ್ನು ಮುಟ್ಟುವುದಕ್ಕೆ ಪ್ರಯತ್ನಗಳನ್ನು ಮಾಡಿದ್ದೇವೆ. ಅವರ ನಿಧನ ವ್ಯಕ್ತಿಗತವಾಗಿ ನನಗೆ ಬಹಳ ದುಃಖವನ್ನು ತಂದು ಕೊಟ್ಟಿದೆ. ಜೊತೆಗೆ ಶ್ರೀ ಜೆ.ಡಿ. ಸೋಮಪ್ಪನವರು ಈ ಸಭೆಯ ಸದಸ್ಯರಾಗಿದ್ದರು. ಸಕಲೇಶಪುರ ಕ್ಷೇತ್ರದಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿದ್ದರು. ಹಾಗೆಯೇ ಶ್ರೀ ಜಿ. ಶಿವಪ್ಪನವರು ಭೀಮಸಮುದ್ರದಲ್ಲಿ ಕೃಷಿ ಮನೆತನದಲ್ಲಿ ಜನಿಸಿ, ಸೆನೆಟ್ ಅಕಾಡೆಮಿಕ್ ಕೌನ್ಸಿಲ್, ಮತ್ತಿತರ ಸಂಸ್ಥೆಗಳಲ್ಲಿ ಕೋ-ಅಪರೇಟಿವ್ ಬ್ಯಾಂಕ್‌ನಲ್ಲಿ ಕೆಲಸ ಮಾಡಿದ್ದರು.

ಶ್ರೀ ಮೊಹಸೀನ್ ಕಮಲ್ ನಮ್ಮ ಬೀದರ್ ಜಿಲ್ಲೆಯ ಅತಿ ಪ್ರಭಾವಿ ಶಾಸನಸಭಾ ಸದಸ್ಯರಾಗಿದ್ದರು. ಹಾಗೆಯೇ ಮಾನ್ಯ ಪುಟ್ಟೇಗೌಡರು, ಶ್ರೀಮತಿ ಅನ್ನಪೂರ್ಣದೇವಿಯವರು, ಇವರೆಲ್ಲರೂ ನಮ್ಮ ಸಾರ್ವಜನಿಕ ಜೀವನದಲ್ಲಿ ಬೆಳಗಿದರು. ಹಿರಿಯ ಪತ್ರಕರ್ತರಾಗಿದ್ದಂಥ ಶಾಮರಾಯರು ಲೋಕ ಶಿಕ್ಷಣ ಟ್ರಸ್ಟ್‌ನ ವಿವಿಧ ಹೊಣೆಗಾರಿಕೆಗಳನ್ನು ನಿರ್ವಹಿಸಿದ್ದು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಗೆ ಒಂದು ಹೊಸ ಆಯಾಮ ನಿರ್ಮಾಣ ಮಾಡಿ ಅದು ಅತ್ಯಂತ ಪ್ರತಿಷ್ಠಿತ ಪತ್ರಿಕೆಯೊಂದಾಗಿ ಹೊರ ಹೊಮ್ಮುವುದಕ್ಕೆ ಶಾಮರಾವ್‌ರವರು ಅಪಾರವಾಗಿ ಶ್ರಮಿಸಿದರು. ನಲವತ್ತು ವರ್ಷಗಳ ಕಾಲ ಅವರ ಜೊತೆಯಲ್ಲಿ ಒಡನಾಡತಕ್ಕಂಥ ಅವಕಾಶ ನನ್ನದಾಗಿತ್ತು.

11.30 ಎ.ಎಂ.

ನಾನು ವಿಧಾನಸಭೆಯ ವಿರೋಧಪಕ್ಷದ ಸದಸ್ಯನಾಗಿದ್ದಾಗ, ಅವರು ಆಗಿನ ಕಾಲದಲ್ಲಿ ಅತ್ಯಂತ ಪ್ರಭಾವ ಬೀರಬಲ್ಲ ಒಬ್ಬ ಪತ್ರಕರ್ತರಾಗಿದ್ದರು. ಅವರ ನಿಧನವು ಪತ್ರಿಕಾ ಜಗತ್ತಿಗೆ ಒಂದೇ ಅಲ್ಲ, ನಮ್ಮ ಒಟ್ಟಾರೆ ಜನಜೀವನದಲ್ಲಿ ಒಂದು ದೊಡ್ಡ ನಷ್ಟವುಂಟಾಗಿದೆ. ಮೊನ್ನೆ ಶುಕ್ರವಾರ ರಾತ್ರಿ ರೈಲು ತಪ್ಪಿದ ಪರಿಣಾಮವಾಗಿ 20 ಜನ ಅಮಾಯಕರು ಮೃತಪಟ್ಟಿದ್ದಾರೆ. ಅದರಲ್ಲಿ ನಮ್ಮ ರಾಜ್ಯದವರೂ ಸೇರಿದ್ದಾರೆ. ಇದು ನಮ್ಮ ದೇಶದಲ್ಲಿ ಆಗಿಂದ್ದಾಗ್ಗೆ ಆಗುತ್ತಿರತಕ್ಕಂಥ ಅಪಘಾತಗಳ ಸರಮಾಲೆ. ಆದರೆ ನಮ್ಮ ದೇಶದ ರೈಲ್ವೆ ವ್ಯವಸ್ಥೆಯನ್ನು ಹಾಗೂ ಗಾತ್ರವನ್ನು ಗಮನಿಸಿದಾಗ ಇಂತಹ ದುರಂತಗಳು ಆಗಿಂದಾಗ್ಗೆ ಸಂಭವಿಸಿದರೂ ಕೂಡ ಜಗತ್ತಿನ ಚೌಕಟ್ಟಿನಲ್ಲಿ ಭಾರತೀಯ ರೈಲ್ವೆ ಬಹಳ ದೊಡ್ಡ ಹೆಸರನ್ನು ಮಾಡಿರತಕ್ಕಂಥ ಸಂಸ್ಥೆ. ಕೇಂದ್ರ ಸರ್ಕಾರದವರು ಈ ಅಪಘಾತ ಆದ ರೀತಿ ಹಾಗೂ ಏನು ಕಾರಣ ಎನ್ನುವುದರ ಬಗ್ಗೆ ತನಿಖೆ ಮಾಡುವುದಕ್ಕೆ ಮುಂದೆ ಬಂದಿದ್ದು, ನಾನು, ಈ ದುರಂತದಲ್ಲಿ ಮೃತಪಟ್ಟ ಹಾಗೂ ನೊಂದ ಜನರಿಗೆ ಈ ಸದನದ ಪರವಾಗಿ ನಮ್ಮ ಸಾಂತ್ವನವನ್ನು ಹೇಳಿ, ಮತ್ತೊಮ್ಮೆ ಮೃತರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹಾರೈಸಿ ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, ಸರ್ಕಾರದ ಪರವಾಗಿ ಏನಾದರೂ ಪರಿಹಾರವನ್ನು ಘೋಷಣೆ ಮಾಡಿ. ಕೇಂದ್ರ ರೈಲ್ವೆಯವರು ಪರಿಹಾರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯದ ಕಡೆಯಿಂದ ಮೃತಪಟ್ಟವರಿಗೆ ಏನಾದರೂ ಪರಿಹಾರವನ್ನು ಘೋಷಣೆ ಮಾಡಿ.

†ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಏನು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ, ಅದರಲ್ಲಿ ಕೆಲವು ಪ್ರಮುಖ ನಾಯಕರು, ಅವರು ಈ ಶಾಸನ ಸಭೆಯ ಶಾಸಕರು ಇರಬಹುದು, ಸಾಮಾಜಿಕ ಕಾರ್ಯಕರ್ತರು ಇರಬಹುದು, ಅವರೆಲ್ಲರ ನಿಧನದಿಂದ ಇವತ್ತು ನಮ್ಮ ರಾಜ್ಯ ಬಡವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅದರಲ್ಲಿ ಪ್ರಮುಖವಾಗಿ ದಿ: ಎ.ಕೆ. ಅನಂತಕೃಷ್ಣ, ದಿ: ಜೆ.ಡಿ. ಸೋಮಪ್ಪ, ದಿ: ಜೆ. ಶಿವಪ್ಪ, ದಿ: ಮೊಹಸೀನ್ ಕಮಾಲ್, ದಿ: ಪುಟ್ಟೇಗೌಡರು ಹಾಗೂ ದಿ : ಎನ್. ಅನ್ನಪೂರ್ಣದೇವಿ ಇವರೆಲ್ಲರೂ ಕೂಡ ಈ ಒಂದು ಶಾಸನಸಭೆಯ ಶಾಸಕರಾಗಿ, ಜನಪ್ರತಿನಿಧಿಗಳಾಗಿ, ಜನರ ಸೇವೆಯನ್ನು ಮಾಡಿದ್ದು ನಮ್ಮ ಕಣ್ಮುಂದೆ ಇದೆ ಮತ್ತು

ಕೇವಲ ಶಾಸನಸಭೆಯ ಸದಸ್ಯರಷ್ಟೇ ಅಲ್ಲ, ತಮ್ಮ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವಂತಹ ವಿಕೇಂದ್ರೀತ ವ್ಯವಸ್ಥೆಯ ಕೆಳಹಂತದ ಕೆಲವು ಪ್ರಮುಖವಾದಂತಹ ಜನಪ್ರತಿನಿಧಿ ಸ್ಥಾನವನ್ನು ಅಲಂಕರಿಸಿ ತಮ್ಮ ಅನುಭವದಿಂದ ಸಮಾಜಕ್ಕೆ ಹೆಚ್ಚು ಕೆಲಸವನ್ನು ಮಾಡಿದ್ದನ್ನು ನಾವು ನೋಡಿದ್ದೇವೆ. ಅವರು ಇವತ್ತು ನಮ್ಮ ಜೊತೆ ಇಲ್ಲ. ಅದರ ಜೊತೆ ದಿ : ಕೆ. ಶ್ಯಾಮರಾವ್ ಅವರು ಹಿರಿಯ ಪತ್ರಿಕೋದ್ಯಮಿಯಾಗಿ ಕೆಲಸವನ್ನು ಮಾಡಿದಂತಹವರು. 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ ಒಂದು ಹಂತದಲ್ಲಿ ಮುಚ್ಚಿ ಹೋಯಿತು ಎನ್ನುವಂತಹ ಒಂದು ವಾತಾವರಣ ನಿರ್ಮಾಣವಾದಂತಹ ಸಂದರ್ಭದಲ್ಲಿ, ಈ ಒಂದು ಸಂಯುಕ್ತ ಕರ್ನಾಟಕದ ದುರಾಡಳಿತದ ವಿರುದ್ಧ ನ್ಯಾಯಾಂಗದ ಹೋರಾಟವನ್ನು ಮಾಡಿ, ಅದರಲ್ಲಿ ಯಶಸ್ವಿಯಾಗಿ ಅದರ ನೇತೃತ್ವವನ್ನು ತೆಗೆದುಕೊಂಡು, ಆ ಸಂಯುಕ್ತ ಕರ್ನಾಟಕ ಪತ್ರಿಕೆ ಜನರ ಹೃದಯದ ಭಾಗವೇನೋ ಎನ್ನುವಂತಹ ರೀತಿಯಲ್ಲಿ ಕಟ್ಟಿ ಬೆಳೆಸಿದ್ದು ಮಾನ್ಯ ಶ್ಯಾಮರಾವ್ ಎಂದರೆ ತಪ್ಪಾಗಲಾರದು. ಅವರಲ್ಲಿ ಇರುವಂತಹ ಜಿಗುಟುತನ, ಅವರಲ್ಲಿ ಇರುವಂತಹ ಹೋರಾಟದ ಒಂದು ಕಿಚ್ಚು, ಬಹುಶಃ ಅದನ್ನು ಎಲ್ಲರೂ ಅನುಕರಣೆ ಮಾಡುವಂತಹ ಒಂದು ಗುಣವೆಂದು ಹೇಳಬೇಕಾಗುತ್ತದೆ. ತಮ್ಮ ಇಳಿವಯಸ್ಸಿನಲ್ಲಿ ಸಹ ಜಿದ್ದಿನಿಂದ ಯಾವುದೇ ಒಂದು ವಿಷಯದ ಬಗ್ಗೆ ಹೋರಾಟದ ಮಾಡುವಂತಹ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ನಾನು ಬಹಳ ಹತ್ತಿರದಿಂದ ಅವರನ್ನು ಕಂಡಿದ್ದರಿಂದ ಆ ಒಂದು ಗುಣಗಳು ನನ್ನ ಕಣ್ಣ ಮುಂದೆ ಇದೆ ಎನ್ನುವುದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಯಾವುದೇ ಒಂದು ವಿಷಯಕ್ಕೆ ಹೋರಾಟ ಮಾಡುವಂತಹ ಪ್ರವೃತ್ತಿ ಇದ್ದಂತಹ ಶಾಮರಾವ್ ಅವರು ಇಂದು ನಮ್ಮ ಜೊತೆ ಇಲ್ಲ. ಅವರ ಒಂದು ನಿಧನದಿಂದ ಇವತ್ತು ನಮ್ಮ ಪತ್ರಿಕೋದ್ಯಮ ರಂಗ ಹಾಗೂ ಸಾಮಾಜಿಕ ರಂಗ ಬಡವಾಗಿದೆ ಎಂದು ಈ ಸಂದರ್ಭದಲ್ಲಿ ಅವರನ್ನು ನೆನಪಿಸಕೊಳ್ಳುತ್ತಾ, ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತಿದ್ದೇನೆ. ಇನ್ನು ಮಾನ್ಯ ನಾಗಪ್ಪ ಅವರ ಸಾವು ಒಂದು ದುರಂತ. ಇವತ್ತು ನಾಗಪ್ಪನವರು ನಮ್ಮ ಜೊತೆ ಇಲ್ಲ. ಮಾನ್ಯ ನಾಗಪ್ಪನವರಿಗೆ ಈ ಸದನದ ಮುಖಾಂತರ ಶ್ರದ್ಧಾಂಜಲಿ ಮಾಡುವಂತಹ ಪ್ರಸಂಗ ಬರುತ್ತದೆಂದು ನಾವು ನೆನಸಿಕೊಂಡಿರಲಿಲ್ಲ. ವೀರಪ್ಪನ್‌ನಿಂದ ನಾಗಪ್ಪನವರ ಅಪಹರಣ ಆದಂತಹ ಸಂದರ್ಭದಲ್ಲಿ ನಮ್ಮಲ್ಲಿ ಎಲ್ಲೋ ಒಂದು ಕಡೆ ಆಸೆ ಇತ್ತು. ಅದೇನೆಂದರೆ ಇವತ್ತಲ್ಲ ನಾಳೆ ಡಾ|| ರಾಜಕುಮಾರ್ ಯಾವ ರೀತಿ ಸುರಕ್ಷಿತವಾಗಿ ಬಿಡುಗಡೆಯಾಗಿ ಬಂದರು, ಅದೇ ರೀತಿ ಮಾನ್ಯ ನಾಗಪ್ಪನವರು ಯಾವುದೇ ಒಂದು ಹಂತದಲ್ಲಿ ಸುರಕ್ಷಿತವಾಗಿ ಹೊರಗೆ ಬರುತ್ತಾರೆ, ಅವರು ನಮ್ಮ ಜೊತೆ ಮಾತನಾಡುತ್ತಾರೆ, ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ ಎಂದು ಕೊನೇ ಕ್ಷಣದವರೆಗೂ ಕೂಡ ನಮ್ಮಲ್ಲಿ ಆಸೆ ಮೂಡಿತ್ತು. ಆದರೆ ನಮ್ಮೆಲ್ಲರ ದುರ್ದೈವ ಮಾನ್ಯ ನಾಗಪ್ಪನವರ ಒಂದು ದುರಂತ ಹತ್ಯೆಯಾಯಿತು. ಅದನ್ನು ಇವತ್ತಿಗೂ ಕಲ್ಪನೆ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ನಾಗಪ್ಪನವರು ಸರಳ ಸಜ್ಜನಿಕೆಗೆ ಹೆಸರಾದಂತಹ ವ್ಯಕ್ತಿ. ಅಜಾತಶತ್ರು. ಅಂತಹ ಒಬ್ಬ ಸರಳ ಸಜ್ಜನಿಕೆ ರಾಜಕಾರಣಿ. ರಾಜಕಾರಣದಲ್ಲಿ ಇಂತಹ ಜನರು ಸಿಗುವುದು ಅಪರೂಪ. ಇಂತಹ ಒಬ್ಬ ಸಜ್ಜನ ವ್ಯಕ್ತಿಗೆ ಈ ರೀತಿಯಾದಂತಹ ದುರಂತ ಸಂಭವಿಸಿದೆ ಎನ್ನುವುದು ಬಹಳಷ್ಟು ನಮಗೆ ನಮ್ಮ ಮನಸ್ಸಿಗೆ ನೋವು ತರುವಂತಹ ಸಂಗತಿ. ಅಂತಹ ವ್ಯಕ್ತಿಯನ್ನು ನಾವು ರಕ್ಷಣೆ

ಮಾಡುವುದಕ್ಕಾಗಲಿಲ್ಲ ಎನ್ನುವುದು ಬಹಳ ನೋವಿನ ಸಂಗತಿ. 1994ರಲ್ಲಿ ನಾನು ಶಾಸಕನಾಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ ಅವರನ್ನು ಬಹಳ ಹತ್ತಿರದಿಂದ ನೋಡಿದಂತಹ ವ್ಯಕ್ತಿ. ಅವರು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಎಪಿಎಂಸಿ ಮತ್ತು ಇನ್ನಿತರ ಇಲಾಖೆಯಲ್ಲಿ ಬಹಳ ದಕ್ಷವಾಗಿ ಕೆಲಸ ಮಾಡಿದ್ದನ್ನು ನಾನು ನೋಡಿದ್ದೇನೆ. ಅವರು ನಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮ ಇದ್ದಾಗ ಹೆಬಸೂರು ಗ್ರಾಮಕ್ಕೆ ಬಂದಿದ್ದರು. ಅವರು ತಮ್ಮ ಕಾರಿನಲ್ಲಿ ನನ್ನನ್ನು ಕರೆದುಕೊಂಡು ಹೋಗಿ ಬಹಳ ಆತ್ಮೀಯವಾಗಿ ಮಾತನಾಡಿ ಚರ್ಚೆ ಮಾಡಿದ್ದನ್ನು ನಾನು ನೋಡಿದ್ದೇನೆ. ಕೆಲವು ಮಂತ್ರಿಗಳು ಹೇಗಿರುತ್ತಾರೆ ಎಂದರೆ ಅಹಂಕಾರ, ಠೇಂಕಾರ ಇರುತ್ತದೆ. ಆದರೆ ಅವರು ಮೊದಲಿನಿಂದಲೂ ಸರಳ ಸಜ್ಜನಿಕೆ ವ್ಯಕ್ತಿಯಾಗಿದ್ದು, ಮಂತ್ರಿಯಾಗಿ ಅಹಂಕಾರದ, ಠೇಂಕಾರದ ಮಾತನ್ನು ಆಡಿದ್ದನ್ನು ಯಾವತ್ತಿಗೂ ನಾನು ನೋಡಿಲ್ಲ. ಅಂತಹ ಅಪರೂಪದ ವ್ಯಕ್ತಿ ನಾಗಪ್ಪನವರು. ಎರಡೂವರೆ ವರ್ಷದ ಹಿಂದೆ ನಾನು ಪ್ರತಿಪಕ್ಷ ನಾಯಕನಾಗಿದ್ದಾಗ ನಾನು ಅವರ ಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿ ಯಾವುದೋ ಒಂದು ಗ್ರಾಮದಲ್ಲಿ ಗಲಾಟೆಯಾಗಿ ಪೊಲೀಸರ ದೌರ್ಜನ್ಯ ಹಾಗೂ ರೈತರ ಮೇಲೆ ದಬ್ಬಾಳಿಕೆಯಾಗಿತ್ತು. ಆಗ ಮಾನ್ಯ ನಾಗಪ್ಪನವರು ನನಗೆ ಫೋನ್ ಮಾಡಿದ್ದರು. ಹಾಗೂ ಅಲ್ಲಿ ಇದ್ದಂತಹ ನಮ್ಮ ಕಾರ್ಯಕರ್ತರೂ ಕೂಡ ನನಗೆ ಫೋನ್ ಮಾಡಿ ನೀವು ಒಂದು ಸಲ ಇಲ್ಲಿಗೆ ಭೇಟಿ ಆಗುವುದಕ್ಕೆ ಬರಬೇಕೆಂದು ಹೇಳಿದಾಗ ನಾನು ಆ ಗ್ರಾಮಕ್ಕೆ ಭೇಟಿಯಾಗಿ ಬಂದೆ. ಅವರು ಜನತಾ ದಳ (ಯು) ಪಕ್ಷದ ನಾಯಕರಾಗಿ ಕೆಲಸ ಮಾಡಿದಂತವರು. ಅಲ್ಲಿಗೆ ಹೋದಾಗ ಭಾರತೀಯ ಜನತಾ ಪಕ್ಷದ ನಮ್ಮ ಕಾರ್ಯಕರ್ತರು ಮೊಟ್ಟಮೊದಲು ನಮ್ಮನ್ನು ಕರೆದುಕೊಂಡು ಹೋಗಿದ್ದು ಮಾನ್ಯ ನಾಗಪ್ಪನವರ ಮನೆಗೆ, ಅಂದರೆ ಅವರು ಒಂದು ಪಕ್ಷದ ನಾಯಕರಾಗಿ ಕೆಲಸ ಮಾಡುತ್ತಿದ್ದರೂ ಕೂಡ ಪಕ್ಷಾತೀತವಾಗಿ ಅವರ ನಡವಳಿಕೆ ಇತ್ತು. ನಮ್ಮ ಕಾರ್ಯಕರ್ತರು, ನಾಗಪ್ಪನವರ ಮನೆ ಮುಖಾಂತರ ಹೋಗೋಣ, ಅವರು ಯಾವುದೇ ಒಂದು ಪಕ್ಷಕ್ಕೆ ಸೇರಿದ್ದರೂ ಸಹ ಅವರು ನಮ್ಮ ನಾಯಕರೂ ಹೌದು ಎಂದು ಹೇಳಿದರು. ನಂತರ ಆ ಗಲಭೆಪೀಡಿತ ಪ್ರದೇಶಕ್ಕೆ ನಾವಿಬ್ಬರೂ ನಮ್ಮ ಕಾರಿನಲ್ಲಿ ಹೋಗಿ ಭೇಟಿಯಾಗಿ ಬಂದೆವು. ಅಲ್ಲಿದ್ದಂತಹ ಜನರಿಗೆ ಸಮಾಧಾನ ಹೇಳಿ ಬಂದೆವು. ನಂತರ ಊಟದ ವ್ಯವಸ್ಥೆ ಎಲ್ಲಿ ಮಾಡಬೇಕು? ಆದರೆ ಕಾರ್ಯಕರ್ತರು ನಮ್ಮೆಲ್ಲರ ಊಟದ ವ್ಯವಸ್ಥೆಯನ್ನು ಮಾನ್ಯ ನಾಗಪ್ಪನವರ ಮನೆಯಲ್ಲಿ ಮಾಡಿದ್ದರು. ನನ್ನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಆತ್ಮೀಯವಾಗಿ ಊಟ ಉಪಚಾರ ಮಾಡಿದರು. ಮಾನ್ಯ ನಾಗಪ್ಪನವರ ಪತ್ನಿಯವರೂ ಸಹಿತ ಊಟ ಉಪಚಾರದ ವ್ಯವಸ್ಥೆಯನ್ನು ಮಾಡಿದರು, ಅವರ ದಾಂಪತ್ಯ ಸಹ ಅಷ್ಟೇ ಅಪರೂಪ, ಸರಳತೆಯನ್ನು ಹೊಂದಿತ್ತು, ಇವತ್ತು ಸಹಿತ ಮಾನ್ಯ ನಾಗಪ್ಪನವರ ಆತ್ಮೀಯತೆ ಮತ್ತು ಸರಳ ಸಜ್ಜನಿಕೆ ನನ್ನ ಕಣ್ಣ ಮುಂದೆ ಇದೆ. ಇಂತಹ ಒಬ್ಬ ಅಪರೂಪದ ವ್ಯಕ್ತಿ ಇವತ್ತು ನಮ್ಮ ಜೊತೆಗೆ ಇಲ್ಲವೆನ್ನುವಂತಹ ವೇದನೆ, ಕೊರಗುವಂಥಾದ್ದು ಆಗಿದೆ. ಮಾನ್ಯ ನಾಗಪ್ಪನವರ ಕುಟುಂಬ ವರ್ಗದವರು ಎಲ್ಲಾ ರೀತಿಯಲ್ಲೂ ಪ್ರಯತ್ನ ಮಾಡಿದರು, ಶ್ರೀಮತಿ ಪರಿಮಳ ನಾಗಪ್ಪನವರು, ಪತಿಯ ಸುರಕ್ಷಿತ ಬಿಡುಗಡೆಯಾಗಬೇಕೆಂದು ಪ್ರಧಾನಮಂತ್ರಿಯವರನ್ನು, ಉಪ ಪ್ರಧಾನಮಂತ್ರಿಯವನ್ನು ಭೇಟಿ ಮಾಡಿದರು, ಅವರು ಎಲ್ಲಿಯವರೆಗೆ ಹೋದರೆಂದರೆ ತಮಿಳುನಾಡಿನ

ಮುಖ್ಯ ಮಂತ್ರಿಯವರನ್ನು ಸಹ ಭೇಟಿ ಮಾಡಿ ಮಾತುಕತೆಯಾಡಿದರೂ ಸಹಿತ ಏನು ಯಶಸ್ಸು ಸಿಗಲಿಲ್ಲ, ಹೀಗಾಗಿ ಇವತ್ತು ಈ ಒಂದು ದುರಂತವಾಗಿ ಮಾನ್ಯ ನಾಗಪ್ಪನವರ ಅಂತ್ಯವನ್ನು ಕಾಣುವಂಥಾದ್ದು ಆಯಿತು. ಇವತ್ತಿನ ದಿವಸ ಈ ವಿಧಾನ ಸಭೆಯ ಅಧಿವೇಶನ ಕರೆದಿರುವಂತಹ ಸಂದರ್ಭ ವೀರಪ್ಪನ್‌ನನ್ನು ಹಿಡಿಯಲು ಹೇಗೆ ಕಾರ್ಯಾಚರಣೆ ಮಾಡಬೇಕು, ಮಾನ್ಯ ನಾಗಪ್ಪನವರನ್ನು ಹೇಗೆ ಬಿಡಿಸಿಕೊಂಡು ಬರಬೇಕೆಂಬ ಬಗ್ಗೆ ಚರ್ಚೆ ಮಾಡುವುದಕ್ಕೆ ವಿಧಾನ ಸಭೆಯ ಅಧಿವೇಶನವಾಗಲಿಲ್ಲ, ಇವತ್ತು ಮಾನ್ಯ ನಾಗಪ್ಪನವರ ದುರಂತ ಹತ್ಯೆಯಾದ ಮೇಲೆ, ಅವರ ಹತ್ಯೆ ಹೇಗೆ ಆಯಿತು? ಇದನ್ನು ಯಾರು ಮಾಡಿದರು? ಎಂಬ ಬಗ್ಗೆ ಚರ್ಚೆ ಮಾಡಲು ಈ ಅಧಿವೇಶನವನ್ನು ಕರೆದಿದ್ದೇವೆ, ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಎಷ್ಟು ಖೇದ ತರುವಂತಹ ಸಂಗತಿ ಎಂದು ನನಗನ್ನಿಸುತ್ತಿದೆ. ಇವತ್ತು ನಾನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ, ಇವತ್ತಿನ ಸಭೆ ಶ್ರದ್ಧಾಂಜಲಿಯ ಸಭೆಯಾಗಿದೆ, ಇದು ಗಂಭೀರವಾದ ವೇದಿಕೆಯಾಗಿದೆ, ಇಂಥಾದ್ದರಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಯಾರು ಮಾನ್ಯ ನಾಗಪ್ಪನವರನ್ನು ಹತ್ಯೆ ಮಾಡಿದರು, ಏಕೆ ಮಾಡಿದರು? ಯಾರ ತಪ್ಪಿನಿಂದ ಆಯಿತು, ಎಂಬ ಬಗ್ಗೆ ಚಿಂತನೆಯಾಗಬೇಕಾಗುತ್ತದೆ. ಈ ವಿಷಯಗಳು ಇದುವರೆಗೂ ಹೊರಗೆ ಬರುತ್ತಾ ಇಲ್ಲ, ಪ್ರತಿನಿತ್ಯ ಒಂದಲ್ಲ, ಒಂದು ರೀತಿಯಲ್ಲಿ ನಿಗೂಢತೆ ಕಾಡುತ್ತಿದೆ. ಇವತ್ತು ವೃತ್ತಪತ್ರಿಕೆಯಲ್ಲಿ ಸಹಿತ ಬಂದಿದೆ, 1998ರಲ್ಲಿ ಸಹ ಸರ್ಕಾರಕ್ಕೆ ಒಂದು ಪತ್ರ ಬಂದಿತ್ತು, ಇವರಿಗೆ ಮತ್ತು ಕೃಷ್ಣಸ್ವಾಮಿ ಎನ್ನುವವರಿಗೆ ಹಾಗೂ 4-5 ಜನರಿಗೆ ಸೆಕ್ಯೂರಿಟಿ ಕೊಡಬೇಕೆಂದು ಬಂದಿತ್ತು, ಅರ್ಕೇಶ್ ವರದಿಯ ಪ್ರಕಾರ ವೈ-ಗ್ರೇಡ್‌ನ ಒಂದು ಸೆಕ್ಯೂರಿಟಿ ಕೊಡಬೇಕಾಗಿತ್ತು, ಆದರೆ ಒಬ್ಬ ಕಾನ್ಸ್‌ಟೇಬಲ್‌ನಿಂದ ಇವೆಲ್ಲವನ್ನೂ ತಡೆಯುವುದಕ್ಕೆ ಸಾಧ್ಯವೇ? ಆದ್ದರಿಂದ ಇದರಲ್ಲಿ ನೀವು ಪೂರ್ಣ ಎಚ್ಚರಿಕೆಯನ್ನು ತೆಗೆದುಕೊಂಡಿದ್ದರೆ ಮಾನ್ಯ ನಾಗಪ್ಪನವರ ಅಪಹರಣ ಆಗುತ್ತಿರಲಿಲ್ಲ. ಅವರ ಹತ್ಯೆ ಆಗುತ್ತಿರಲಿಲ್ಲವೆನ್ನುವ ಭಾವನೆ ಇದೆ, ಇವತ್ತು ನಾವು ನಮ್ಮ ಕೈಯಾರೆ ಮಾನ್ಯ ನಾಗಪ್ಪನವರನ್ನು ಕಳೆದುಕೊಂಡಿದ್ದೇವೆ, ಸರ್ಕಾರ ಮನಸ್ಸು ಮಾಡಿದ್ದರೆ ಅವರು ಸುರಕ್ಷಿತವಾಗಿ ಬಿಡುಗಡೆಯಾಗುತ್ತಿದ್ದರು ಎನ್ನುವ ಅಭಿಪ್ರಾಯ ಮೂಡಿದೆ. ಇವತ್ತು ಅವರು ತಮ್ಮ ಕಣ್ಣಾರೆ ಈ ದುರಂತವನ್ನು ಅನುಭವಿಸುವಂತಹ ಪರಿಸ್ಥಿತಿ ಬಂದಿರುವಂಥಾದ್ದು ನೋಡಿದರೆ, ಬಹುಶಃ ಇದರಷ್ಟು ದುರಂತ ಇನ್ನು ಯಾವುದೂ ಇಲ್ಲ. ಇಂತಹ ಒಂದು ವ್ಯವಸ್ಥೆಯನ್ನು ನೋಡಿದಾಗ ನಾವು ಸರ್ಕಾರದ ಅಸ್ತಿತ್ವದ ಬಗ್ಗೆಯೇ ಪ್ರಶ್ನೆ ಮಾಡಬೇಕಾಗುತ್ತದೆ. ಈ ರೀತಿಯಾಗಿ ಯಾರಿಗೂ ಬರಬಾರದು, ಯಾವಾಗಲೂ ಎಲ್ಲೂ ಇಂಥ ದುರಂತ ಸಂಭವಿಸಬಾರದು, ಇವತ್ತು ನಿಜವಾಗಲೂ ಮಾನ್ಯ ನಾಗಪ್ಪನವರ ಆತ್ಮಕ್ಕೆ ಶಾಂತಿಯನ್ನು ಕೊಡಬೇಕೆಂದರೆ ವೀರಪ್ಪನ್‌ನನ್ನು ತಕ್ಷಣ ಬಂಧನ ಮಾಡುವಂತಹ ಕಾರ್ಯಾಚರಣೆಯಾಗಬೇಕಾಗುತ್ತದೆ. ಡಾ॥ ರಾಜ್‌ಕುಮಾರ್‌ರವರ ಅಪಹರಣವಾಗಿ, ಅವರು ಬಿಡುಗಡೆಯಾಗಿ ಬಂದಮೇಲೆ ಕಾರ್ಯಾಚರಣೆ ಮಾಡಿದ್ದರೆ ನಾಗಪ್ಪನವರ ಅಪಹರಣವಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ, ಆದರೆ ಇದು ಆಗಲಿಲ್ಲ. ಇದೇ ತಿಂಗಳ 8ನೇ ತಾರೀಖಿನಂದು ನಾಗಪ್ಪನವರ ಮೃತ ದೇಹ ಸಿಕ್ಕಾಗ, ನನಗೆ ಯಾವುದೋ ಒಂದು ಹಂತದಲ್ಲಿ ಆಸೆ ಇತ್ತು, ಈ 23ನೇ ತಾರೀಖಿನಂದು ಅಧಿವೇಶನ ನಡೆಯುತ್ತಿದೆ, ಅಷ್ಟರಲ್ಲಿ ಕಾರ್ಯಾಚರಣೆ ಮಾಡಿ ವೀರಪ್ಪನನ್ನು

ಹಿಡಿದುಕೊಂಡು ಬರುತ್ತಾರೆ, ಇಲ್ಲ, ಅವನ ಮೃತ ದೇಹವನ್ನಾದರೂ ತೆಗೆದುಕೊಂಡು ಬರುತ್ತಾರೆಂಬ ಆಸೆ ಇತ್ತು, ಇದು ಯಾವುದೋ ಒಂದು ಹಂತದಲ್ಲಿತ್ತು, ಅದು ಆಗಲಿಲ್ಲ. ಇಲ್ಲಿ ನಾವು ಅಧಿವೇಶನ ಕರೆದು ಚರ್ಚೆ ಮಾಡುತ್ತೇವೆ, ಇವರ ಹತ್ಯೆ ಹೇಗೆ ಆಯಿತು, ಇದು ಇಲ್ಲಿ ಆಗುವಂಥಾದ್ದು. ಇವತ್ತು ಮಾನ್ಯ ನಾಗಪ್ಪನವರ ಕುಟುಂಬದವರು ಬಹಳ ದುಃಖದಲ್ಲಿದ್ದಾರೆ. ಅವರ ಕುಟುಂಬ ಸದಸ್ಯರು ಮತ್ತೆ ಅವರ ಮಗ ಸಹಿತ ಸದನದ ಗ್ಯಾಲರಿಯಲ್ಲಿ ಕುಳಿತಿದ್ದಾರೆ. ಅವರ ಕುಟುಂಬ ವರ್ಗದವರು ಬಹಳಷ್ಟು ದುಃಖದಲ್ಲಿದ್ದಾರೆ, ಅವರಿಗೆ ಧೈರ್ಯವನ್ನು ತುಂಬುವಂತಹ ಕೆಲಸ ಇವತ್ತು ಆಗಬೇಕಾಗಿದೆ, ಮತ್ತೆ ನಾವು ಮಾನ್ಯ ನಾಗಪ್ಪನವರನ್ನು ಮರಳಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ಅವರ ಕುಟುಂಬದವರಿಗೆ ಧೈರ್ಯ ತುಂಬವಂತಹ ಕೆಲಸವನ್ನು ನಾವೆಲ್ಲರೂ ಮಾಡಬೇಕಾಗಿದೆ. ಅದರಲ್ಲಿ ನಾವು ಪಾಲುದಾರರಾಗಿ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ, ಮತ್ತೆ ಮಾನ್ಯ ನಾಗಪ್ಪನವರ ಆತ್ಮಕ್ಕೆ ಶಾಂತಿ ಕೋರುತ್ತೇನೆ. ಈ ಒಂದು ದಿಶೆಯಲ್ಲಿ ನಿಜವಾಗಿಯೂ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ವೀರಪ್ಪನ್ ಅನ್ನು ಹಿಡಿಯುವಂತಹ ಕೆಲಸವಾಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಇನ್ನು ಸಾಕಷ್ಟು ವಿಚಾರಗಳನ್ನು ಈಗ ಹೇಳಬಹುದು, ಆದರೆ ಇದು ವೇದಿಕೆಯಲ್ಲ, ಆದುದರಿಂದ ಹೆಚ್ಚು ಹೇಳುವುದಿಲ್ಲ. ಈಗ ನಾನು ಹೆಚ್ಚು ಹೇಳಲಾರದೇ, ಮತ್ತೊಮ್ಮೆ ದೇವರಲ್ಲಿ ಪ್ರಾರ್ಥನೆ ಮಾಡಿ, ತಾವು ಮಂಡಿಸಿರುವಂತಹ ಸಂತಾಪ ಸೂಚನೆಯ ಪ್ರಸ್ತಾವನೆಗೆ ಬೆಂಬಲವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಈ ದಿವಸ ಯಾರೂ ಸಹಿತ ಉಲ್ಲಾಸದಿಂದ ಈ ಸಭೆಯಲ್ಲಿ ಸೇರಿಲ್ಲ, ಅತ್ಯಂತ ದುಗುಡವಾದ ಮನಸ್ಸಿನಿಂದ, ದುಃಖದ ಮನಸ್ಸಿನಿಂದ ಈ ವ್ಯವಸ್ಥೆಯ ಬಗ್ಗೆ ಬಹಳ ನೊಂದು ನಾವೆಲ್ಲರೂ ಇಲ್ಲಿ ಸೇರಿದ್ದೇವೆ. ಈ ಸನ್ನಿವೇಶದಲ್ಲಿ ತಾವು ಮಂಡಿಸಿರುವಂತಹ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸಿ, ನಾನು ಒಂದೆರೆಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ದೇವರು ಅನೇಕ ಸಂದರ್ಭದಲ್ಲಿ ಹೂತೋಟದಲ್ಲಿರುವಂತಹ ಒಳ್ಳೆಯ ಹೂವುಗಳನ್ನು ಮೊದಲು ಪೂಜೆಗೆ ಆರಿಸಿಕೊಳ್ಳುತ್ತಾನೆಂದು ನನಗನ್ನಿಸುತ್ತದೆ. ನಾನು 1973ರಲ್ಲಿ ಪಕ್ಷವನ್ನು ಸೇರಿದ್ದು, 1974ರಿಂದಲೂ ಸತತವಾಗಿ ಮಾನ್ಯ ನಾಗಪ್ಪ ಅವರ ಪ್ರಾಮಾಣಿಕತೆ, ಸಜ್ಜನಿಕೆ, ಹಾಗೂ ಅಜಾತಶತ್ರುತ್ವವನ್ನು ನೋಡಿರುವವರಲ್ಲಿ ನಾನೂ ಒಬ್ಬನಾಗಿದ್ದೇನೆ. ಮಾನ್ಯ ನಿಜಲಿಂಗಪ್ಪನವರು 1967ರಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅವರನ್ನು ಕರೆಸಿ, ವಿಧಾನ ಸಭೆಗೆ ಹೋಗುವಂತಹ ಕೆಲಸವನ್ನು ಮಾಡಿದ್ದರು, 1967ರ ನಂತರ ನಡೆದಂತಹ 5-6 ಚುನಾವಣೆಗಳ ಅವರು ಪರಾಜಯ ಅನುಭವಿಸಿದರೂ ಸಹಿತ ತಮ್ಮ ಕ್ಷೇತ್ರದ ಪ್ರಗತಿ ಮತ್ತು ನಂಬಿರುವಂತಹ ಜನರ ಪರವಾಗಿ ಹೋರಾಟ ಮಾಡಿಕೊಂಡು ಬಂದು, ಕೊನೆಗಾಲದಲ್ಲಿ ತಮ್ಮ ಜೀವವನ್ನೇ ಮುಡಿಪಾಗಿಡುವಂತಹ ಸಂದರ್ಭ ಬರುತ್ತದೆಂದು ನಾವು ಯಾರೂ ಸಹಿತ ಭಾವಿಸಿರಲಿಲ್ಲ. ಇದನ್ನು ಬಹುಶಃ ಇಡೀ ರಾಷ್ಟ್ರದಲ್ಲೇ ಅದರಲ್ಲೂ ವಿಶೇಷವಾಗಿ ನಮ್ಮ ರಾಜ್ಯದಲ್ಲಿ ನೋಡುತ್ತಿದ್ದೇನೆ. ಶ್ರೀಮತಿ ಪರಿಮಳ ನಾಗಪ್ಪನವರಿಗೆ ಈ ಕಷ್ಟ ಬರಬಾರದಾಗಿತ್ತು, ಅವರ ಸ್ಥಿತಿಯಲ್ಲಿ ನಾವು ಇದ್ದಿದ್ದರೆ ಏನು

ಮಾಡುತ್ತಿದ್ದೆವು, ಅವರ ಮಗ ಪ್ರೀತಂ ಅನುಭವಿಸುತ್ತಿರುವಂತಹ ಸಂಕಟದಲ್ಲಿ ನಮ್ಮ ಮಕ್ಕಳು ಇದ್ದಿದ್ದರೆ ಏನು ಅನುಭವಿಸುತ್ತಿದ್ದರು, ಇದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕು. ಇವತ್ತು ದುಃಖದ ಮಹಾಪೂರ ಏಕೆ ಹರಿಯುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳ ಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, 35 ವರ್ಷಗಳ ಕಾಲ ಅವರು ಹೋರಾಟ ಮಾಡುವಂತಹ ಸಂದರ್ಭದಲ್ಲಿ, ಅವರ ಕುಟುಂಬದ ಆರ್ಥಿಕ ಸ್ಥಿತಿಯನ್ನು ನೋಡಿದಾಗ, ಇವತ್ತು ಅವರು ಒಬ್ಬ ವಿಶೇಷವಾದ ರಾಜಕಾರಣಿ ಆಗಿದ್ದರು, ಎನ್ನುವಂಥಾದ್ದನ್ನು ನಾನು ಮನಗಂಡಿದ್ದೇನೆ. ಇಂತಹ ದುರ್ಮರಣ ಹೊರ ದೇಶದಲ್ಲಿರುವಂತಹ ನಮ್ಮ ಶತ್ರುಗಳಿಗೂ ಬರಬಾರದು ಎಂದು ಅನಿಸುತ್ತದೆ, ಏಕೆಂದರೆ ಯುದ್ಧದಲ್ಲಿ ಯಾವುದೇ ಒಬ್ಬ ಪಾಳೆಯದ ಸೈನಿಕ ಸತ್ತರೂ ಸಹಿತ ಈ ದುರ್ಮರಣ ಬರಬಾರದೆಂದು ಒಬ್ಬ ವೀರ ಸೇನಾನಿ ಹೇಳುತ್ತಾನೆ. ಬಹುಶಃ ಅವತ್ತು ಸರ್ಕಾರಕ್ಕೆ ಮಾಹಿತಿ ಬಂದಿರಲಿಕ್ಕಿಲ್ಲ, ಮಾನ್ಯ ಗೃಹ ಸಚಿವರಿಗೆ ಆ ದಿವಸ ಕಾಡಿನ ಆ ಜಾಗದಿಂದ ಮೃತ ದೇಹವನ್ನು ಕಾಮಗೆರೆಗೆ ತಂದಂತಹ ಸಂದರ್ಭದಲ್ಲಿ ದುಃಖದ ಮಹಾಪೂರ ಹರಿದಂತಹ ಸಂದರ್ಭದಲ್ಲಿ ಶ್ರೀಮತಿ ಪರಿಮಳ ನಾಗಪ್ಪನವರು ಸರ್ಕಾರದಿಂದ ಕೊಟ್ಟಂತಹ ಸಕಲ ಗೌರವವನ್ನು ತಿರಸ್ಕಾರ ಮಾಡಿದರು, ಮತ್ತೆ ಮಾನ್ಯ ಸಿಂಧ್ಯರವರೇ, ನನ್ನ ಹತ್ತಿರ ಅಳುವುದಕ್ಕೆ ಕಣ್ಣಲ್ಲಿ ಕಣ್ಣೀರು ಇಲ್ಲ, ನನ್ನ ಕಣ್ಣಲ್ಲಿರುವಂಥಾದ್ದು ರಕ್ತ ಒಂದೇ ಎಂದು ಹೇಳಬೇಕಾದರೆ, ಇದಕ್ಕೆ ಕಾರಣ ಏನು? ವೀರಪ್ಪನ್ ಹೃದಯಕ್ಕಿಂತ ಕಠೋರವಾದ ಹೃದಯವೆಂದರೆ, ನಾಗಪ್ಪನವರನ್ನು ಕೊಂದು, ನಾಲ್ಕು ದಿನಗಳ ಕಾಲ ಅಲ್ಲೇ ಅವರ ಶವವನ್ನು ಕೊಳೆಯಲು ಬಿಟ್ಟು ಬಂದಂಥ ಪಾತಕಿಗಳ ಹೃದಯ ಎಷ್ಟೊಂದು ಕಠೋರವಾಗಿತ್ತು ಎನ್ನುವುದನ್ನೂ ಸಹ ನಾವು ಯೋಚನೆ ಮಾಡಬೇಕಾಗುತ್ತದೆ. we mourn the death and criticize the alive. ನಾಗಪ್ಪನವರು ಬದುಕಿದ್ದಾಗ ಅವರನ್ನು ಬಹಳ ಹೊಗಳುತ್ತಿದ್ದೆವು ಅವರು ಸತ್ತ ಮೇಲೆ ಬಹಳ ತೆಗಳುತ್ತಿದ್ದೆವು, ಇವತ್ತು ಅವರನ್ನು ಹೊಗಳುತ್ತಿದ್ದೇವೆ. ಇದು ನಮ್ಮ ಸಮಾಜದ ವ್ಯವಸ್ಥೆ. ಇದರ ಬಗ್ಗೆ ನಾನು ಯಾರನ್ನೂ ದೂಷಣೆ ಮಾಡಲು ಹೋಗುವುದಿಲ್ಲ. ನಾವು ಮಂತ್ರಿಗಳಾಗಿದ್ದಾಗ, ಶಾಸಕರಾಗಿದ್ದಾಗ, ತೆಗೆದುಕೊಳ್ಳತಕ್ಕಂಥ ಅನೇಕ ಕಠಿಣವಾದ ನಿರ್ಧಾರಗಳು ನಮ್ಮ ಪ್ರಾಣಕ್ಕೆ ಅಪಾಯ ತರಬಹುದು ಎನ್ನುವ ಭಯ ಇವತ್ತು ನಮ್ಮಲ್ಲಿ ಅನೇಕರನ್ನು ಕಾಡುತ್ತಿದೆ. ರಾಜ್ಯ ಸರ್ಕಾರ, ತಮಿಳುನಾಡಿನ ಸರ್ಕಾರ, ಕೇಂದ್ರ ಸರ್ಕಾರ ಮತ್ತು ನಮ್ಮ ಸಂವಿಧಾನ ಇವೆಲ್ಲವೂ ಇದ್ದರೂ ಸಹ ನೂರಾಏಳು ದಿನಗಳ ಕಾಲ ಅಪಹರಣದಲ್ಲಿದ್ದಂಥ ಒಂದು ಜೀವವನ್ನು ನಾವು ಬದುಕಿಸಿಕೊಳ್ಳಲು ಆಗಲಿಲ್ಲ ಎನ್ನುವ ಭಾವನೆ ನನ್ನನ್ನು ಕಾಡುತ್ತಿದೆ. ನಾನೂ ಸೇರಿದ ಹಾಗೆ, ನಾವೆಲ್ಲರೂ ಸಹ ನಾಗಪ್ಪನವರ ಹತ್ಯೆಗೆ ಕಾರಣಕರ್ತರು ಎನ್ನುವುದು ನನ್ನ ಅಭಿಪ್ರಾಯ. ಈ ವ್ಯವಸ್ಥೆ ನಾಗಪ್ಪನವರ ದುರ್ಮರಣಕ್ಕೆ ಕಾರಣ ಎನ್ನುವುದು ನನ್ನ ಅಭಿಪ್ರಾಯ. ಈ ಒಂದು ಸಾವು ನಮಗೂ ಕಾದಿದೆಯೇನೋ ಎನ್ನುವ ಭಯ ಅನೇಕ ಸಂದರ್ಭಗಳಲ್ಲಿ ನಮಗೂ ಸಹ ಬರುತ್ತದೆ. ಶ್ರೀಮತಿ ಪರಿಮಳ ನಾಗಪ್ಪನವರಿಗೆ, ಅವರ ಮಗ ಪ್ರೀತಂರವರಿಗೆ ಅವರ ಮಕ್ಕಳಿಗೆ ಮತ್ತು ಅಳಿಯಂದಿರಿಗೆ, ನಾಗಪ್ಪನವರು ಕಾಯಿಲೆ ಬಿದ್ದು ಅಥವಾ ಮತ್ತೊಂದು ಆಕಸ್ಮಿಕವಾಗಿ ಸತ್ತು ಹೋಗಿದ್ದರೆ ಇಷ್ಟೊಂದು ದುಃಖವಾಗುತ್ತಿರಲಿಲ್ಲ. ಆದರೆ, ಈ ರೀತಿಯ ಸಾವನ್ನು ಅವರು ಯಾವತ್ತೂ ಮರೆಯಲು ಸಾಧ್ಯವಿಲ್ಲ. ಅವರಿಗೆ ಈ ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕಂಥ ನೈತಿಕ

ಹಕ್ಕು, ಆಡಳಿತದಲ್ಲಿರತಕ್ಕಂಥ ಜನಗಳಿಗೆ ಇದೆಯೋ, ಇಲ್ಲವೋ ಎನ್ನುವುದರ ಬಗ್ಗೆಯೂ ತಾವು ಆತ್ಮಶೋಧನೆಯನ್ನು ಮಾಡಿಕೊಳ್ಳಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಲು ಬಯಸುತ್ತೇನೆ. ಕೊನೆಯ ಪಕ್ಷ, ಕರ್ನಾಟಕ ಸರ್ಕಾರದ ಸಚಿವ ಸಂಪುಟದ ಸಭೆ ಮಾಡಿದಂಥ ತೀರ್ಮಾನವನ್ನು, ಒಬ್ಬ ಜವಾಬ್ದಾರಿ ವ್ಯಕ್ತಿ, ತೆಗೆದುಕೊಂಡು ಹೋಗಿ ಅವರ ಕುಟುಂಬಕ್ಕೆ ಕೊಡತಕ್ಕಂಥ ಧೈರ್ಯ ಇವತ್ತು ನಿಮಗೆ ಇಲ್ಲ. ನಿಮಗೆ ಆ ಧೈರ್ಯ ಬರಲು ಸಾಧ್ಯವೂ ಇಲ್ಲ. ಅದಕ್ಕೆ ಕಾರಣವಿದೆ, ನಮಗೆ ಗೊತ್ತಿದೆ. ನಿಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ, ಶ್ರೀಮತಿ ಸೋನಿಯಾ ಗಾಂಧಿಯವರು ಕಳುಹಿಸಿದಂಥ ಸಂತಾಪ ಸೂಚಕ ಪತ್ರವನ್ನೂ ಸಹಿತ ತೆಗೆದುಕೊಂಡು ಹೋಗಿ ನಾಗಪ್ಪನವರ ಶ್ರೀಮತಿಯವರಿಗೆ ಕೊಡತಕ್ಕಂಥಾದ್ದು ನಿಮ್ಮ ಕೈಯ್ಯಲ್ಲಿ ಆಗುತ್ತಿಲ್ಲ. ಈ ಭಯ ಏಕೆ? ಈ ಭಯಕ್ಕೆ ಕಾರಣ ಇದೆ. ಅದರ ಬಗ್ಗೆ ಮಾತನಾಡುವ ಹಕ್ಕನ್ನು ಕಾದಿರಿಸಿಕೊಂಡು, ಈ ಬಗ್ಗೆ ವಿಧಾನಸಭೆಯಲ್ಲಿ ಯಾವ ರೀತಿ ಚರ್ಚೆ ಮಾಡಬೇಕು ಎಂದು ಅಧ್ಯಕ್ಷರಾದ ತಾವು ಇವತ್ತಿನ ಸಭೆಯಲ್ಲಿ ತೀರ್ಮಾನ ಮಾಡುತ್ತೀರಿ, ಆ ಸಂದರ್ಭದಲ್ಲಿ ನಾನು ಮಾತನಾಡುತ್ತೇನೆ ಎಂದು ಹೇಳಿ, ಇವತ್ತು ನಾಗಪ್ಪನವರ ಕುಟುಂಬಕ್ಕೆ ಬೇಕಾಗಿರತಕ್ಕಂಥಾದ್ದು ಏನು ಎನ್ನುವುದನ್ನು ಯೋಚನೆ ಮಾಡಬೇಕು. ಭಗವಂತ ಮಾತ್ರ ಅವರಿಗೆ ಆ ಧೈರ್ಯವನ್ನು ಕೊಡಬಲ್ಲ. ಏಕೆಂದರೆ, ನಾವೆಲ್ಲಾ ಕೊಟ್ಟಿರತಕ್ಕಂಥ ಧೈರ್ಯಗಳು ಹುಸಿಯಾಗಿವೆ. ಆ ಧೈರ್ಯವನ್ನು ಭಗವಂತ ಅವರ ಕುಟುಂಬಕ್ಕೆ ಕೊಡಲಿ ಎಂದು ಬೇಡಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಹೇಳಿದ ಹಾಗೆ, ವೀರಪ್ಪನ್‌ನನ್ನು ಹಿಡಿಯತಕ್ಕಂಥಾದ್ದು ಒಂದು ರೀತಿಯಲ್ಲಿ ಬಹಳ ಪ್ರಾಮುಖ್ಯವಾದ ವಿಚಾರ. ಆ ವಿಚಾರದಲ್ಲಿ, ನಾನೂ ಸೇರಿದಂತೆ, ಅನೇಕ ಸರ್ಕಾರಗಳು ವಿಫಲವಾಗಿದೆ. ಅದರಲ್ಲಿ ಯಶಸ್ವಿಯಾಗುವುದರಲ್ಲಿ ನಾವು ಸರ್ಕಾರದ ಜೊತೆಯಲ್ಲಿದ್ದೇವೆ. ಆದರೆ ಇದರ ನೈತಿಕ ಹೊಣೆ ಮತ್ತು ಜವಾಬ್ದಾರಿ ನಿಮ್ಮ ಮೇಲೆ ಇದೆ. ನಡೆದಂಥ ಆ ಘಟನಾವಳಿಗಳನ್ನು ನೆನೆಸಿಕೊಂಡರೆ ಯಾರಿಗೇ ಆಗಲೀ ಜಂಘಾಬಲ ಅಡಗುತ್ತದೆ. ಅದರ ಬಗ್ಗೆ ತಾವು ಆತ್ಮ ಶೋಧನೆಯನ್ನು ಮಾಡಿಕೊಳ್ಳಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇದಕ್ಕೆ ಬೇರೆ ಬಣ್ಣಗಳನ್ನು ಕೊಡದೆ ನಾಗಪ್ಪ ಒಬ್ಬ ಮನುಷ್ಯನಾಗಿದ್ದ, ಒಬ್ಬ ಕನ್ನಡಿಗನಾಗಿದ್ದ, ಒಬ್ಬ ಅಮಾಯಕನಾಗಿದ್ದ ಎನ್ನುವುದನ್ನು ನಾವೆಲ್ಲರೂ ಮನಗಾಣಬೇಕು.

ಇನ್ನು ಶ್ರೀ ಎ.ಕೆ. ಅನಂತಕೃಷ್ಣರವರು ಕರ್ನಾಟಕ ರಾಜ್ಯ ಕಂಡಂಥ ಒಬ್ಬ ಅಪರೂಪದ ಸಮಾಜವಾದಿ ಚಳುವಳಿಗಾರರು. ಅವರು ನಮ್ಮ ವಿದ್ಯಾರ್ಥಿ ದೆಸೆಯ ನಾಯಕರು. ಅವರ ಮಗ ಮತ್ತು ನಾನು ಒಂದೇ ಕಾಲೇಜಿನಲ್ಲಿ ಓದುತ್ತಿದ್ದೆವು. ಅವರು ನಮ್ಮನ್ನು ಬಹಳ ಅಕ್ಕರೆಯಿಂದ, ಪ್ರೀತಿಯಿಂದ ನೋಡಿದರು. ದಿವಂಗತ ಶ್ರೀ ಟಿ.ಆರ್. ಶಾಮಣ್ಣನವರು ಮತ್ತು ಬದುಕಿರುವ ಶ್ರೀ ಪಿ.ಎಸ್. ಕೃಷ್ಣ ಅಯ್ಯರ್‌ರವರು, ಬೆಂಗಳೂರಿನ ಬೆಳವಣಿಗೆಗೆ ಯಾವ ರೀತಿ ಕಾರಣಕರ್ತರೋ, ಅದೇ ರೀತಿ ಶ್ರೀ ಅನಂತಕೃಷ್ಣರವರೂ ತಮ್ಮದೇ ಆದ ರೀತಿಯಲ್ಲಿ ಬೆಂಗಳೂರಿನ ಬೆಳವಣಿಗೆಗೆ ದುಡಿದಂಥ, ನಿಜವಾದ ಜಾತ್ಯಾತೀತ ಮನೋಭಾವವನ್ನು ಇಟ್ಟುಕೊಂಡಿದ್ದಂಥ ಒಬ್ಬ ಮುಖಂಡರು ಅವರು. ಇನ್ನು, ಸಕಲೇಶಪುರದ ಶ್ರೀ ಜೆ.ಡಿ. ಸೋಮಪ್ಪನವರು ಒಬ್ಬ ಸ್ನೇಹಮಯ ವ್ಯಕ್ತಿಯಾಗಿದ್ದರು. ಶ್ರೀ ಮೊಹಸೀನ್ ಕಮಾಲ್‌ರವರು 10 ತಿಂಗಳುಗಳ ಕಾಲ, ಒಂದು ಉಪಚುನಾವಣೆಯಲ್ಲಿ ಬೀದರ್‌ನಿಂದ ಗೆದ್ದು ಬಂದಿದ್ದರು. ಎಲ್ಲಾ ರೀತಿಯ ಜಾತಿ, ಜನಾಂಗ, ಧರ್ಮದವರು ಇರತಕ್ಕಂಥ

ಜಿಲ್ಲೆ ಬೀದರ್. ಆ ಜಿಲ್ಲೆಯ ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿ ದುಡಿದಂಥವರು ಅವರು. ಚಿತ್ರದುರ್ಗ ಜಿಲ್ಲೆಯ ಶ್ರೀ ಶಿವಪ್ಪನವರು ಶ್ರೀ ಪುಟ್ಟೇಗೌಡರು ಮತ್ತು ಶ್ರೀಮತಿ ಅನ್ನಪೂರ್ಣದೇವಿಯವರನ್ನು ನಾವು ಕಳೆದುಕೊಂಡಿದ್ದೇವೆ. ಅವರೆಲ್ಲರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ಶ್ರೀ ಕೆ. ಶಾಮರಾವ್‌ರವರ ಕೊನೆಯ ದಿನಗಳು ಸಂತೋಷಕರವಾಗಿರಲಿಲ್ಲ. ಪತ್ರಿಕೆಗೋಸ್ಕರ ಅವರು ತಮ್ಮ ಜೀವವನ್ನು ಮುಡಿಪಾಗಿಟ್ಟಿದ್ದರು. ಯಾವ ಪತ್ರಿಕಾ ಸ್ವಾತಂತ್ರ್ಯದ ಮತ್ತೊಂದು ಭಾಗ ಕರ್ನಾಟಕದಲ್ಲಿ ಆಗಿತ್ತು, ಆ ಪತ್ರಿಕೆಯ ಸಾವಿನ ಜೊತೆಯಲ್ಲಿ, ಬದುಕಿನ ಜೊತೆಯಲ್ಲಿ, ಬೆಳವಣಿಗೆಯ ಜೊತೆಯಲ್ಲಿ ಹೋರಾಟ ಮಾಡಿ, ಸಮಗ್ರ ಕರ್ನಾಟಕದ ಶಿಲ್ಪಿ ದಿಃ ಶ್ರೀ ನಿಜಲಿಂಗಪ್ಪನವರ ಜೊತೆಯಲ್ಲಿ ಕೈಸೇರಿಸಿ ಕೆಲಸ ಮಾಡಿದಂಥ ಒಬ್ಬ ನಾಯಕರಾಗಿದ್ದರು. ಯಾವುದೇ ಪಕ್ಷ ಆಡಳಿತದಲ್ಲಿದ್ದರೂ ಸಹ ಶಾಮರಾಯರು ವಿಧಾನಸಭೆಗೆ, ವಿಧಾನ ಪರಿಷತ್ತಿಗೆ, ರಾಜ್ಯಸಭೆಗೆ ಹೋಗತಕ್ಕಂಥ ಅವಕಾಶಗಳು ಅವರಿಗೆ ಬಹಳ ಇದ್ದವು. ಆದರೆ ಅವರು ಅದೆಲ್ಲವನ್ನೂ ತ್ಯಾಗ ಮಾಡಿ, ಪ್ರಜಾಪ್ರಭುತ್ವದ ಶ್ರೇಷ್ಠವಾದ ಧರ್ಮವಾಗಿರತಕ್ಕಂಥ ಸತ್ಯವನ್ನು ಎತ್ತಿ ಹಿಡಿಯತಕ್ಕಂಥ ಪತ್ರಿಕಾ ಧರ್ಮವನ್ನು ಪರಿಪಾಲನೆ ಮಾಡಿದಂಥ ಒಬ್ಬ ಧೀಮಂತ ನಾಯಕರು. ಇವತ್ತು ಅವರ ವೈಕುಂಠ ಸಮಾರಾಧನೆಯೂ ಹೌದು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಬೇಡುತ್ತೇನೆ.

ಇತ್ತೀಚಿನ ದಿನಗಳಲ್ಲಿ ರೈಲ್ವೆ ದುರಂತಗಳು ಹೆಚ್ಚುತ್ತಿವೆ. ಮೊನ್ನೆ ನಡೆದ ದುರಂತದಲ್ಲಿ ಕರ್ನಾಟಕ ಮತ್ತು ಆಂಧ್ರದ ಹತ್ತಾರು ಜನರು ಸತ್ತಿದ್ದಾರೆ. ರೈಲ್ವೆ ದುರಂತಗಳನ್ನು ತಪ್ಪಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅವರ ಆತ್ಮಕ್ಕೂ ಸಹ ಶಾಂತಿಯನ್ನು ಕೋರಿ, ಇವತ್ತು ಈ ಎಲ್ಲಾ ಮಹನೀಯರ ಆತ್ಮಕ್ಕೆ ಶಾಂತಿಯನ್ನು ಕೋರತಕ್ಕಂಥ ಸಂತಾಪ ಸೂಚಕ ನಿರ್ಣಯವನ್ನು ತಾವು ಮಂಡಿಸಿದ್ದೀರಿ. ಆ ನಿರ್ಣಯಕ್ಕೆ ನನ್ನ ಭಾವನೆಗಳನ್ನೂ ಸೇರಿಸಿ, ಅದಕ್ಕೆ ಸಮ್ಮತಿಯನ್ನು ಸೂಚಿಸಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲಿ ಇಂದು ಒಂದು ಭಾರೀ ದುಃಖಕರ ದಿನ ಎಂದು ನಾನು ಭಾವಿಸುತ್ತಿದ್ದೇನೆ. ಕರ್ನಾಟಕ ರಾಜ್ಯದ ಜನಸಾಮಾನ್ಯರ ರಕ್ಷಣೆಗಾಗಿ, ಅವರ ಹಿತರಕ್ಷಣೆಯ ಚರ್ಚೆಗಾಗಿ ಮೀಸಲಿಡಬೇಕಾದಂಥ ಈ ಸದನದಲ್ಲಿ, ಇಂದು ಅದರ ಬದಲಾಗಿ ಈ ಸದನ ಸಂತಾಪ ಸೂಚಕ ಸಭೆಯಾಗಿ ಪರಿವರ್ತನೆ ಆಗಿರತಕ್ಕಂಥಾದ್ದು ನಿಜವಾಗಿ ಒಂದು ದುರ್ದೈವದ ಸಂಗತಿ ಎಂದು ನಾನು ಭಾವಿಸುತ್ತಿದ್ದೇನೆ. ನಾನು ಇಲ್ಲಿ ಸುದೀರ್ಘವಾಗಿ ಮಾತನಾಡಲು ಇಚ್ಛೆಪಡುತ್ತಿಲ್ಲ. ಒಂದು ವಿಚಾರವನ್ನು ನಾವೆಲ್ಲರೂ ತಿಳಿದುಕೊಳ್ಳಬೇಕಾಗಿದೆ. ಸತ್ಯ ಸಂಗತಿಗಳ ಬಗ್ಗೆ ನಾವು ಯಾವಾಗ, ಎಲ್ಲಿ, ಯಾವ ರೀತಿ ವಿಚಾರ ಮಂಥನಗಳಾಗಬೇಕೋ, ಆ ರೀತಿಯ ವಿಚಾರ ಮಂಥನಗಳು ಸರಿಯಾದ ಸಂದರ್ಭದಲ್ಲಿ, ಸರಿಯಾದ ವೇಳೆಯಲ್ಲಿ ಆಗದಿದ್ದರೆ ಈ ರೀತಿಯ ಘಟನಾವಳಿಗಳು ನಡೆಯುತ್ತವೆ ಎನ್ನುವುದನ್ನು ನಾವೆಲ್ಲರೂ ಮನಗಾಣಬೇಕು. ಯಾವ ಯಾವ ಸಂದರ್ಭಕ್ಕೆ ಪೂರಕವಾದಂಥ ಕೆಲಸಕಾರ್ಯಗಳನ್ನು ಯಾರ್‍ಯಾರು ಮಾಡಬೇಕೋ, ಅವರು

ಅದನ್ನು ಮಾಡದೇ ಇದ್ದಾಗ, ಬೇರೆ ಯಾರೋ ಒಬ್ಬ ಅಮಾಯಕ ಅದಕ್ಕೆ ಬಲಿಯಾಗುತ್ತಾನೆ ಎನ್ನುವುದೂ ಸಹ ಇದರಿಂದ ಕಂಡುಬರುತ್ತದೆ ಎನ್ನುವುದು ಸತ್ಯಸಂಗತಿಯಾಗಿದೆ. ನಾವು ಅದರ ಬಗ್ಗೆ ಚರ್ಚೆ ಮಾಡುವ ಹಂತದಲ್ಲಿ ಚರ್ಚೆಗಳನ್ನು ಮಾಡೋಣ. ಕಳೆದ ವಿಧಾನಸಭೆಯ ಅವಧಿಯಲ್ಲಿ ಈ ಸದನದಲ್ಲಿ ನಾಗಪ್ಪನವರು ಒಬ್ಬ ಶಾಸಕರಾಗಿ, ಮಂತ್ರಿಯಾಗಿ ಕೆಲಸ ಮಾಡಿದಂಥ ಸಂದರ್ಭವನ್ನು ನಾವು ಜ್ಞಾಪಿಸಿ ಕೊಳ್ಳುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ. ದಿನನಿತ್ಯ ಅವರು ನಗುಮುಖದಿಂದ ಇರುತ್ತಿದ್ದರು. ಅಧಿಕಾರದ ಅಹಂಭಾವಗಳು ಅವರಲ್ಲಿ ಇರಲಿಲ್ಲ. ಇನ್ನೊಬ್ಬರನ್ನು ಅತ್ಯಂತ ಗೌರವದಿಂದ ನೋಡುವಂಥ ವ್ಯಕ್ತಿ ಅವರಾಗಿದ್ದರು. ವಿಶೇಷವಾಗಿ, ಶಾಸಕರ ಬಗ್ಗೆ ಅವರಲ್ಲಿ ವಿಶೇಷವಾದ ಗೌರವವಿತ್ತು. ಇತ್ತೀಚಿನ ದಿನಗಳಲ್ಲಿ ನಾವು ನೋಡುತ್ತಿದ್ದೇವೆ, ಯಾವುದೇ ಮಂತ್ರಿ ಮಹೋದಯರ ಕೊಠಡಿಗಳಿಗೆ ಅಥವಾ ಬೇರೆ ಕೊಠಡಿಗಳಿಗೆ ನಾವು ಹೋದರೆ, ಶಾಸಕರುಗಳು ಒಳಗೆ ಹೋಗಲು ಪ್ರವೇಶಾವಕಾಶವೇ ಇರುವುದಿಲ್ಲ. ಅವರ ಹಿಂಬಾಲಕರುಗಳೇ ಅಲ್ಲಿ ಇರುವಂಥ ಸಂದರ್ಭಗಳನ್ನು ನಾವು ನೋಡುತ್ತಿದ್ದೇವೆ. ಆದರೆ ಈ ಮಂತ್ರಿವರ್ಯರು ಇದ್ದಂಥ ಸಂದರ್ಭದಲ್ಲಿ ನಾನು ನೋಡಿದ್ದೇನೆ. ನಾನು ಹಲವಾರು ಭಾರಿ ಅವರ ಕೊಠಡಿಗೆ ಹೋದಾಗ, ಅಲ್ಲಿ ಅವರ ಸಂಬಂಧಿಕರು ಅಥವಾ ಸಂಬಂಧಪಟ್ಟವರು ಬೇರೆ ಯಾರೇ ಇದ್ದರೂ ಅವರನ್ನು ಹೊರಗೆ ಕಳುಹಿಸಿ, ಶಾಸಕರಿಗೆ, ಒಬ್ಬ ಜನಪ್ರತಿನಿಧಿಯ ಬಗ್ಗೆ ವಿಶೇಷ ಕಾಳಜಿಯನ್ನು ಕೊಡುವಂಥ ವ್ಯವಸ್ಥೆ ಇತ್ತು. ಇವತ್ತಿನ ದಿನಗಳಲ್ಲಿ ನಾವೆಲ್ಲರೂ ಅವರ ಈ ಆದರ್ಶವನ್ನು ಪಾಲಿಸುವುದು ಅತ್ಯಂತ ಸೂಕ್ತ ಎಂದು ನಾನು ಭಾವಿಸುತ್ತಿದ್ದೇನೆ. ಅವರ ಆತ್ಮಕ್ಕೆ ಇದು ಶಾಂತಿಯನ್ನು ಕೊಡಬಲ್ಲದು ಎಂದು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿರುವಂಥ ಒಂದು ಎ ಪಿ ಎಂ ಸಿ ಯಾರ್ಡ್ ವಿಚಾರ ಹೇಳಬೇಕೆಂದರೆ, ಹಲವಾರು ವರ್ಷಗಳಿಂದ ಅಲ್ಲಿಗೆ ಮಾರುಕಟ್ಟೆ ಸ್ಥಳಾಂತರ ಆಗಿರಲಿಲ್ಲ. ಅದನ್ನು ತಕ್ಷಣ ಸ್ಥಳಾಂತರ ಮಾಡಬೇಕು ಎನ್ನುವ ಭಾವನೆ ಅವರ ಮನಸ್ಸಿನಲ್ಲಿತ್ತು. ಆ ದೃಷ್ಟಿಕೋನದಿಂದ ಅವರು ಉತ್ಸಾಹವನ್ನು ತೋರಿಸಿ ಕೆಲಸ ಮಾಡುವಂಥ ಒಬ್ಬ ಮಂತ್ರಿ ಅವರಾಗಿದ್ದರು. ಅವರು ನನ್ನ ಕ್ಷೇತ್ರಕ್ಕೆ ಭೇಟಿ ನೀಡಿ ಹಲವಾರು ಸಂದರ್ಭಗಳಲ್ಲಿ ಇದರ ಬಗ್ಗೆ ಚಿಂತನೆ ಮಾಡಿದ್ದರು. ಸರ್ಕಾರದ ಯಾವುದೇ ಶಕ್ತಿಗಳು ದುರ್ವಿನಿಯೋಗವಾಗದ ಹಾಗೆ ನೋಡಿದಂಥ ಒಬ್ಬ ಮಂತ್ರಿಯಾಗಿ ಅವರು ಕೆಲಸ ನಿರ್ವಹಿಸಿದ್ದಾರೆ ಎನ್ನುವುದನ್ನು ನಾವು ಪುನಃ ಒತ್ತಿ ಹೇಳಬೇಕಾದಂಥ ಅವಶ್ಯಕತೆ ಇದೆ ಎಂದು ಭಾವಿಸುತ್ತಿದ್ದೇನೆ. ಅವರು ಎ ಪಿ ಎಂ ಸಿ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅವರು ತೋರಿಸಿದಂಥ ಕಾಳಜಿಯನ್ನು ಇವತ್ತಿನ ಸರ್ಕಾರ ಕೂಡ ತೋರಿಸಿದರೆ, ಮಾರುಕಟ್ಟೆಗಳ ಸ್ಥಳಾಂತರಕ್ಕೆ ಅವರು ಯಾವ ಪ್ರಯತ್ನವನ್ನು ಮಾಡುತ್ತಿದ್ದರು, ಅದನ್ನು ಈ ಸರ್ಕಾರ ಆದಷ್ಟು ಶೀಘ್ರವಾಗಿ ಮಾಡಿದರೆ, ಅವರ ಆತ್ಮಕ್ಕೆ ಶಾಂತಿ ಸಿಗಬಹುದು ಎಂದು ಅನಿಸುತ್ತದೆ.

12.00 ಪಿಎಂ

ಸನ್ಮಾನ್ಯ ನಾಗಪ್ಪನವರು ಹಾಗೂ ಇತರ ಹಲವಾರು ಜನ ಮೃತಪಟ್ಟವರ ಆತ್ಮಕ್ಕೆ ಆ ದೇವರು ಚಿರಶಾಂತಿಯನ್ನು ಕೊಡಲಿ, ಅವರ ಕುಟುಂಬಸ್ಥರಿಗೆ ಈ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ವಿಶೇಷವಾಗಿ ದಿವಂಗತ ನಾಗಪ್ಪನವರ ವ್ಯಕ್ತಿತ್ವದ ಬಗ್ಗೆ ಹೇಳುವುದಾದರೆ, ಅವರು ಬಹಳ ಸರಳ ಸಜ್ಜನಿಕೆಯ ವ್ಯಕ್ತಿಯಾಗಿ ಅವರ ಜೀವನದ ಕಾಲದಲ್ಲಿ ಎಂದೂ ಕೂಡ ಮತ್ತೊಬ್ಬರಿಗೆ ನೋವನ್ನು ಉಂಟುಮಾಡತಕ್ಕಂಥ ಯಾವುದೇ ಘಟನೆಗಳಿಗೂ ಕೂಡ ಅವಕಾಶ ಮಾಡದೆ, ಮನಸ್ಸಿನಲ್ಲಿ ಎಷ್ಟೇ ಸಿಟ್ಟು ಬಂದರೂ ಕೂಡ ಅದನ್ನು ಅದಮಿಟ್ಟು ಕೊಂಡು, ಇನ್ನೊಬ್ಬರಿಗೆ ನೋವನ್ನು ಉಂಟುಮಾಡದೇ ಇರತಕ್ಕಂಥ ಒಂದು ವ್ಯಕ್ತಿತ್ವವನ್ನು ಹೊಂದಿದ್ದಂಥ ಒಬ್ಬ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಬಹುಶಃ 1962ರಲ್ಲಿ ಅವರು ವಿದ್ಯಾರ್ಥಿ ಜೀವನವನ್ನು ಮುಗಿಸಿ ಊರಿಗೆ ಬಂದಂಥ ಸಂದರ್ಭದಲ್ಲಿ ಅವರು ಪ್ರಥಮ ಬಾರಿಗೆ ವಿಧಾನಸಭೆ ಚುನಾವಣೆಗೆ ಸ್ಪರ್ಧೆ ಮಾಡಿ 1967ರಲ್ಲಿ ಮೊದಲ ಬಾರಿ ವಿಧಾನಸಭೆಯನ್ನು ಪ್ರವೇಶ ಮಾಡಿ ಸುಧೀರ್ಘ ಕಾಲದ ರಾಜಕೀಯ ಅನುಭವವನ್ನು ಪಡೆದಿದ್ದರೂ ಕೂಡ, ಇಷ್ಟೊಂದು ರಾಜಕೀಯದಲ್ಲಿ ಅನುಭವಸ್ಥ, ನಾನು ಒಬ್ಬ ಹಿರಿಯ ರಾಜಕಾರಿಣಿ ಎನ್ನುವ ಒಂದು ತೋರಿಕೆಯನ್ನು ಯಾವತ್ತೂ ತೋರಿಸಿದವರಲ್ಲ. ವಯಸ್ಸಿನಲ್ಲಿ ಚಿಕ್ಕವರಿರಲಿ, ಬಡವರು ಇರಲಿ, ರೈತರು ಇರಲಿ, ಹೀಗೆ ಯಾರೇ ಅವರನ್ನು ಭೇಟಿ ಆದಾಗಲೂ ಕೂಡ ಅವರನ್ನು ಗೌರವದಿಂದ ಕಾಣತಕ್ಕಂಥ ಸ್ವಭಾವ ಅವರಲ್ಲಿ ಇತ್ತು. ಅಂಥ ಒಬ್ಬ ವ್ಯಕ್ತಿಯಾಗಿದ್ದ ಅವರು ಯಾವತ್ತು ಜನಿಸಿದರು ಎನ್ನುವ ವಿಚಾರ ಕೂಡ ಅವರ ಮನೆಯಲ್ಲಿ ಇವತ್ತು ಲಭ್ಯ ಇಲ್ಲ. ಅದೇ ರೀತಿ ಅವರು ಯಾವ ರೀತಿಯಾಗಿ ಹತ್ಯೆ ಆದರು ಎನ್ನುವ ದಿನಾಂಕ ಕೂಡ ಇವತ್ತು ಲಭ್ಯ ಇಲ್ಲ. ಆ ಪರಿಸ್ಥಿತಿಯಲ್ಲಿ ಅವರ ಒಂದು ದುರ್ಮರಣ, ಅಂತ್ಯ ಆಗುತ್ತದೆಂದು ಯಾರೂ ಕನಸು ಮನಸ್ಸಿನಲ್ಲಿಯೂ ನೆನಸಿರಲಿಲ್ಲ. ತಮ್ಮ ಸಂತಾಪ ಸೂಚನೆಯಲ್ಲಿ ಡಿಸೆಂಬರ್-9 ರಂದು ಅವರ ದುರ್ಮರಣದ ವಿಚಾರ ಗೊತ್ತಾಗಿದೆಯೆಂದು ಹೇಳಿದ್ದೀರಿ. ಬಹುಶಃ ಭಾನುವಾರವೇ ಅವರು ದುರ್ಮರಣಕ್ಕೆ ಈಡಾಗಿದ್ದಾರೆ ಎನ್ನುವ ವಿಚಾರ 8ನೇ ತಾರೀಖು ಗೊತ್ತಾಗಿದೆ. ಅದಕ್ಕಿಂತಲೂ 2-3 ದಿವಸಗಳ ಹಿಂದೆ ಅವರ ಹತ್ಯೆ ಆಗಿದೆ ಎನ್ನುವ ವರದಿ ಪ್ರಚಲಿತದಲ್ಲಿದೆ. ಹೀಗಾಗಿ ಅವರು ಯಾವತ್ತು ದುರ್ಮರಣಕ್ಕೆ ಈಡಾದರು ಎನ್ನುವ ವಿಚಾರ ಕೂಡ ಸಂಶಯದ ರೂಪದಲ್ಲಿ ಇರತಕ್ಕಂಥ ಒಂದು ಸನ್ನಿವೇಶ ಇವತ್ತು ನಿರ್ಮಾಣವಾಗಿದೆ. ಯಾರೇ ಆಗಲಿ, ಅವರು ಯಾರೇ ಗಣ್ಯ ವ್ಯಕ್ತಿಗಳು ಆಗಿರಲಿ. ಅವರು ಮಹದೇಶ್ವರ ಬೆಟ್ಟಕ್ಕೆ ಹೋಗಬೇಕಾದರೆ ಕಾಮಗೆರೆ ಹಾದು ಹೋಗಬೇಕು. ಅವರು ಯಾವ ಭಾಗದವರೇ ಇರಲಿ ಯಾವ ಅಧಿಕಾರಿಗಳೇ ಇರಲಿ, ಯಾರೇ ಜನ ಅಲ್ಲಿ ನಾಗಪ್ಪನವರು ಇದ್ದಾರೆಯೇ ಎಂದು ಕೇಳಿದಾಗ, ಆಗ ಅವರ ಮನೆಯಲ್ಲಿ ಅತಿಥ್ಯವನ್ನು ಸ್ವೀಕರಿಸದೇ ಹೋದಂಥ ವ್ಯಕ್ತಿಗಳ ಸಂಖ್ಯೆ ಬಹಳ ವಿರಳ. ಅಂಥ ಒಂದು ಅತಿಥ್ಯವನ್ನು ಮಾಡುತ್ತಿದ್ದಂಥ ಒಂದು ಕುಟುಂಬ ಅವರದಾಗಿತ್ತು. ದಿನಂಗತ ಜೆ.ಹೆಚ್. ಪಟೇಲರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅವರು ಮೂರು ವರ್ಷಗಳ ಕಾಲ ಮಂತ್ರಿಯಾಗಿದ್ದರು. ಆದರೆ ಅವರು ಮಂತ್ರಿಯಾಗಿದ್ದಾರೆಂದು ಯಾರಿಗೂ ಗೊತ್ತಾಗದಿದ್ದ ರೀತಿಯಲ್ಲಿ ಎಲೆಮರೆಕಾಯಿಯಂತೆ ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದರು. ಈಗ ಬಹುಶಃ ಎಸ್ಕಾರ್ಟ್ ಇಲ್ಲದೆ ಮಂತ್ರಿಗಳು ಮನೆಯಿಂದ ಹೊರಗಡೆ ಬರುವುದು ಕಷ್ಟ. ಅಂಥದ್ದರಲ್ಲಿ ನಾಗಪ್ಪನವರು ಒಂದು ಸಲ ನನ್ನ ಕ್ಷೇತ್ರಕ್ಕೆ ಬಂದಂಥ

ಸಂದರ್ಭದಲ್ಲಿ ಅವರ ವ್ಯಾನ್ ಚಾಲಕನಿಗೆ ಕೈಗೆ ಏನೋ ಏಟು ಆಗಿ ಡ್ರೈವಿಂಗ್ ಮಾಡಲಿಕ್ಕೆ ಸಾಧ್ಯ ಇಲ್ಲದೆ ಇರುವ ಪರಿಸ್ಥಿತಿಯಲ್ಲಿ ನಾಗಪ್ಪನವರು ತಮ್ಮ ಊರಿಗೆ ತಲುಪಬೇಕಾಗಿತ್ತು ನಾವು ಬೇರೆ ಪರ್ಯಾಯ ವ್ಯವಸ್ಥೆ ಅಂದರೆ ಯಾವುದಾದರೂ ಸರ್ಕಾರಿ ಇಲಾಖೆಯ ಚಾಲಕರನ್ನು ರೆಡಿ ಮಾಡಿಕೊಡುತ್ತೇವೆ ಅವರನ್ನು ಕರೆದುಕೊಂಡು ಹೋಗಿ ಎಂದು ಹೇಳಿದರೂ ಕೂಡ ನಾಗಪ್ಪನವರು ಅದನ್ನು ಪಡೆದುಕೊಳ್ಳದೆ ತಾವೇ ಆ ಮಂತ್ರಿ ಕಾರನ್ನು ಚಾಲನೆ ಮಾಡಿಕೊಂಡು ತಮ್ಮ ಊರನ್ನು ತಲುಪಿದವರು. ಎಲ್ಲೇ ಇದ್ದರೂ ಕೂಡ ಹಳ್ಳಿಯನ್ನು ಪ್ರೀತಿಸುತ್ತಿದ್ದರು. ಎಷ್ಟೋ ಜನ ಶಾಸಕರು ಮಂತ್ರಿಗಳಾದ ಮೇಲೆ ಸಿಟಿಯೊಳಗೆ ಬಂದು ನೆಲೆಸತಕ್ಕಂಥದ್ದು ವಾಡಿಕೆ. ಆದರೆ ಅವರು ಏನೇ ಇದ್ದರೂ ಕೂಡ ಮತ್ತೆ ತಮ್ಮ ಗ್ರಾಮದಲ್ಲಿ ಹೋಗಿ ಇರಬೇಕು, ಅಲ್ಲಿಯ ಜನಸಾಮಾನ್ಯರ ಜೊತೆ ಇರಬೇಕೆನ್ನುವ ಒಂದು ಅಪೇಕ್ಷೆ ಅವರದಾಗಿತ್ತು. ಅಂಥ ಒಬ್ಬ ವ್ಯಕ್ತಿಗೆ ಇಂಥ ಒಂದು ಪರಿಸ್ಥಿತಿಯಲ್ಲಿ ಅಂತ್ಯ ಆಗುತ್ತದೆ ಎನ್ನುವುದನ್ನು ಊಹಿಸುವುದಕ್ಕೂ ಸಾಧ್ಯವಿಲ್ಲ. ಇನ್ನೊಂದು ವಿಶೇಷವಾಗಿ ನಾವು ಗಮನಿಸಬೇಕಾಗಿರುವುದೇನೆಂದರೆ ಹಿಂದಿನ ಸರ್ಕಾರದಲ್ಲಿ 7 ಹೊಸ ಜಿಲ್ಲೆಗಳು ರಚನೆ ಆದವು. ಅದರಲ್ಲಿ ನಮ್ಮ ಚಾಮರಾಜನಗರ ಜಿಲ್ಲೆ ಕೂಡ ಒಂದು. ಬಹುಶಃ ಆಗ ಅವರು ಮಂತ್ರಿಯಾಗಿದ್ದರು. ಅವರು ಒಂದು ಪ್ರಯತ್ನ ಆವಾಗ ಇಲ್ಲದಿದ್ದರೆ ಆ ಹೊಸ ಜಿಲ್ಲೆ ರಚನೆ ಆಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆ ಒಂದು ಹೊಸ ಜಿಲ್ಲೆ ರಚನೆ ಆಗಬೇಕಾದರೂ ಕೂಡ ಅವರ ಪ್ರಮುಖವಾದಂಥ ಪಾತ್ರ ಆ ಸಂದರ್ಭದಲ್ಲಿ ಇತ್ತು ಎನ್ನುವ ಮಾತನ್ನು ಹೇಳಿ, ಕೊನೆಯದಾಗಿ, ಐದಾರು ಕ್ಯಾಸೆಟ್ ವೀರಪ್ಪನ್ ಕಡೆಯಿಂದ ಬಂದವು. ಐದು ಕ್ಯಾಸೆಟ್ ಬಂದಾಗಲೂ ನಾವು ಒಂದು ಹೊಸ ಸಮಾಚಾರ ಇರುತ್ತದೆಂದು ಏನೋ ಒಂದು ಊಹೆಯಲ್ಲಿ ಇದ್ದೆವು. ಕೊನೆಯದಾಗಿ, ಭಾನುವಾರ 8ನೇ ತಾರೀಖು 6ನೇ ಕ್ಯಾಸೆಟ್ ಬಂದಾಗ ಅವರ ದುರ್ಮರಣ, ಹತ್ಯೆ ಆಗಿದ್ದ ವಿಚಾರ ಕೇಳಿದಂಥ ಸಂದರ್ಭದಲ್ಲಿ ಈ ನಮ್ಮ ಭಾಗದ ಜನರನ್ನು ಆಘಾತಕ್ಕೆ ಉಂಟುಮಾಡಿದೆ. ಈ ಸನ್ನಿವೇಶದಲ್ಲಿ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಎನ್ನುವುದನ್ನು ನಾವು ಈಗ ಕಾದುನೋಡಬೇಕಾಗಿದೆ. ಅಂಥ ವ್ಯಕ್ತಿಯ ಆತ್ಮಕ್ಕೆ ಶಾಂತಿಯನ್ನು ಕೋರಿ, ಅದೇ ರೀತಿ ಉಳಿದವರಿಗೂ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಭೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಇವತ್ತು ಯಾರ ಬಗ್ಗೆ ಸಂತಾಪ ಸೂಚನೆಗಳನ್ನು ಅರ್ಪಿಸುತ್ತಿದ್ದೇವೆ ಎನ್ನುವುದರ ಬಗ್ಗೆ ತಾವು ನಮ್ಮೆಲ್ಲರಿಗೂ ಪಟ್ಟಿಯನ್ನು ಒದಗಿಸಿದ್ದೀರಿ. ಇದನ್ನು ನೋಡಿದ ತಕ್ಷಣ ನಾಗಪ್ಪನವರ ಹೆಸರು ಬಹಳ ಸ್ಪಷ್ಟವಾಗಿ ಕಾಣಿಸಿತು. ಆ ಹೆಸರನ್ನು ಓದಿದ ತಕ್ಷಣ ನನ್ನ ಶರೀರದ ಸ್ವಾಧೀನವನ್ನೇ ಕಳೆದುಕೊಳ್ಳುವಂಥ, ಕಳೆದುಹೋಗುವಂಥ ಒಂದು ಘಟನೆ ನನಗೆ ಇವತ್ತು ಇಲ್ಲಿ ಈ ಸ್ಥಾನದಲ್ಲಿ ಕುಳಿತಿದ್ದಾಗ ಉಂಟಾಯಿತು. ಇದಕ್ಕೆ ನಿಜವಾಗಲೂ ನಾವೆಲ್ಲರೂ ವಿಷಾದವನ್ನು ವ್ಯಕ್ತಪಡಿಸಿರತಕ್ಕಂಥದ್ದು, ನಮ್ಮ ಸಂತಾಪವನ್ನು ಸೂಚಿಸಬೇಕಾಗಿರತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯ. ಮನುಷ್ಯ ಭೂಮಿಯ ಮೇಲೆ ಹುಟ್ಟತಕ್ಕಂಥದ್ದು birth it is biological activity. ಮನುಷ್ಯ ಸಹಜವಾಗಿ ಹುಟ್ಟಿದ ಮೇಲೆ ಸಾವು ಸಹಜವಾಗಿ ಬರತಕ್ಕಂಥದ್ದು ಸರಿ. ಆದರೆ ನಾಗಪ್ಪನವರ ಸಾವು ಖಂಡಿತವಾಗಿ ಸಹಜವಾದಂಥ ಸಾವು ಅಲ್ಲ. ಸ್ವಾಭಾವಿಕವಾಗಿ ಸಾವು ಬಂದಾಗ ನಮ್ಮವರನ್ನು, ನಮ್ಮ ನೆಂಟರಿಷ್ಟರನ್ನು ಕಳೆದುಕೊಂಡಾಗ

ನಮ್ಮೆಲ್ಲರಿಗೂ ಕೂಡ ಕಣ್ಣೀರು ಬರುತ್ತದೆ. ನಾವು ಯಾರಿಗೂ ಕೂಡ ಸಾವನ್ನು ತಪ್ಪಿಸುವಂಥ ಪರಿಸ್ಥಿತಿ ನಮ್ಮ ಕೈಯಲ್ಲಿ ಇಲ್ಲ, ಇರುವುದಿಲ್ಲ. ಆದರೆ ನಾಗಪ್ಪನವರ ಸಾವನ್ನು ತಪ್ಪಿಸುವುದಕ್ಕೆ ಅವರು ಇನ್ನೂ ನಮ್ಮ ಎದುರಿಗೆ ಜೀವಂತವಾಗಿ ಇರತಕ್ಕಂಥ, ಕಾಣತಕ್ಕಂಥ ಎಲ್ಲಾ ಅವಕಾಶಗಳೂ ಸಹ ಇವತ್ತು ಇತ್ತು. ಆದರೆ ದುರಾದೃಷ್ಟವಶಾತ್ ನಾವು ಎಲ್ಲರೂ ಕೂಡ ಇವತ್ತಿನ ದಿವಸ ತಪ್ಪಿತಸ್ಥರ ಸ್ಥಾನದಲ್ಲಿದ್ದೇವೆ. ಅವರ ಸಾವಿಗೆ ನಾವು ಎಲ್ಲರೂ ಕೂಡ ಕಾರಣರಾಗಿದ್ದೇವೆ ಎನ್ನುವುದನ್ನು ನೆನೆಸಿಕೊಂಡಾಗ ನಾನು ಏನು ಹೇಳುವುದಕ್ಕೂ ಆಗದೆ ನನಗೆ ಕುತ್ತಿಗೆ ಹಿಡಿಯುತ್ತಿದೆ. ಅವರ ಸಾವಿನ ವಿಚಾರದಲ್ಲಿ, ಸಾವಿನ ಮೊದಲು, ಅದಕ್ಕಿಂತಲೂ ಮೊದಲ ವಿಚಾರ ಈ ಸದನದಲ್ಲಿ ಚರ್ಚೆ ನಡೆಯುವ ಕಾರಣದಿಂದ ಅವೆಲ್ಲವನ್ನೂ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವೆಲ್ಲವನ್ನು ಆ ಸಂದರ್ಭದಲ್ಲಿ ಮಾತನಾಡಲಿದ್ದೇನೆ. ಆದರೆ ನಾಗಪ್ಪನವರ ಸಾವಿನ ಈ ಸಂದರ್ಭದಲ್ಲಿ ಎಲ್ಲಾ ಸರ್ಕಾರಗಳು ಅದು ರಾಜ್ಯ ಸರ್ಕಾರ ಇರಬಹುದು, ಕೇಂದ್ರ ಸರ್ಕಾರ ಇರಬಹುದು, ಈ ಎಲ್ಲಾ ಸರ್ಕಾರಗಳು ಸಹ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗಿರತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಕಾರಣ ಏನೆಂದರೆ, ಸರ್ಕಾರಗಳ ನಿಲುವು ವ್ಯಕ್ತಿಗಳ ಆಧಾರದ ಮೇಲೆ ಬದಲಾವಣೆ ಆಗುತ್ತಿರತಕ್ಕಂಥದ್ದು ನಾವು ನೋಡುತ್ತಿದ್ದೇವೆ. ಒಬ್ಬೊಬ್ಬರ ಅಪಹರಣ ಆದಂಥ ಕಾಲದಲ್ಲಿ ಒಂದೊಂದು ನಿಲುವು, ಅಪಹರಣಕಾರರಿಗೆ ಶರಣಾಗತಕ್ಕಂಥದ್ದು, ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡತಕ್ಕಂಥದ್ದು ಇದೆ. ಅದಕ್ಕೆ ಕಾರಣ ಏನೆಂದರೆ ಅವರ ಅಂದರೆ ಅಪಹರಣಕ್ಕೀಡಾದವರ ಜೀವ ಬಹಳ ಅಮೂಲ್ಯ ಎಂದು ಆ ಕೃತ್ಯದಲ್ಲಿ ತೊಡಗಿರತಕ್ಕಂಥದ್ದು. ಇನ್ನು ಕೆಲವರು ಅಪಹರಣ ಆದಂಥ ಸಂದರ್ಭದಲ್ಲಿ ಅವರ ಜೀವ ಅಷ್ಟು ಮುಖ್ಯ ಅಲ್ಲ. ಅಕಸ್ಮಾತ್ತಾಗಿ ಅವರ ಜೀವ ಹೋದರೂ ಪರವಾಗಿಲ್ಲ ಎನ್ನುವ ನಿಲುವುಗಳನ್ನು ತಳೆಯುವುದಿದೆಯಲ್ಲಾ, ಇದು ಅಮಾನುಷವಾದ ನಿಲುವು. ಈ ಅಮಾನುಷವಾದ ನಿಲುವನ್ನು ಸರ್ಕಾರಗಳು ತಾಳದೇ ಎಲ್ಲಾ ಸಂದರ್ಭದಲ್ಲೂ ಒಂದೇ ನಿಲುವನ್ನು ತಾಳಬೇಕಾವುದು ಅವಶ್ಯಕತೆ ಇದೆ. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಇಸ್ರೇಲ್ ದೇಶದಲ್ಲಿ ಯಾರಾದರೂ ಕೂಡ ಅಪಹರಣಕ್ಕೊಳಗಾದರೆ, ಅಂತಹ ಅಪಹರಣಕಾರರ ಜೊತೆ ಅವರು ಮಾತನಾಡುವುದೇ ಇಲ್ಲ. ಅವರನ್ನು ಸದೆಬಡಿಯುವುದು ಹೇಗೆ? ಅವರನ್ನು ಹಿಡಿಯುವುದು ಹೇಗೆ ಎನ್ನುವ ನಿಲುವನ್ನು ಆ ದೇಶದ ಸರ್ಕಾರ ತಳೆದಿದೆ. ದುರಾದೃಷ್ಟವಶಾತ್, ಆ ಪರಿಸ್ಥಿತಿ ಇವತ್ತು ನಮ್ಮ ದೇಶದಲ್ಲಿ ಇಲ್ಲ. ನಮ್ಮ ದೇಶದಲ್ಲಿ ಒಂದು ಜೀವಕ್ಕೂ ಕೂಡ ಬೆಲೆ ಕಟ್ಟುವ ನೀಚ ಕೆಲಸಗಳನ್ನು ಸರ್ಕಾರಗಳು ಮಾಡುತ್ತಾ ಬಂದಿವೆ. ಆದುದರಿಂದ ಈ ನೀಚತನವನ್ನು ಬಿಟ್ಟು, ದೃಢವಾದ ನಿಲುವು ತೆಗೆದುಕೊಳ್ಳಬೇಕು. ಯಾರಾದರೂ ಅಪಹರಣಕ್ಕೊಳಗಾದರೆ, ಜೀವಕ್ಕೆ ಬೆಲೆ ಕಟ್ಟುವುದಿಲ್ಲ, ಆ ಕೃತ್ಯ ಎಸಗುವವರನ್ನು ಇನ್ನಿಲ್ಲದ ಹಾಗೆ ಮಾಡುವ ನಿಲುವನ್ನು ತಾಳುತ್ತೇವೆಂಬ ನಿಲುವನ್ನು ಸರ್ಕಾರ ತಳೆಯಬೇಕಾಗುತ್ತದೆ. ಈ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದುದರಿಂದ ಈ ಸದನದ ಮೂಲಕ ನಾವು ಕೇಂದ್ರ ಸರ್ಕಾರಕ್ಕೂ ಹೇಳಬೇಕಾಗುತ್ತದೆ. ಅಪಹರಣಕಾರರ ವಿಚಾರದಲ್ಲಿ ಯಾವ ರೀತಿ ನಡೆದುಕೊಳ್ಳಬೇಕು? ಯಾವ ರೀತಿಯ ನಿಲುವು ತಾಳಬೇಕೆನ್ನುವುದನ್ನು ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಆ ಕೆಲಸವನ್ನು

ಸರ್ಕಾರ ಮಾಡುತ್ತದೆಂದು ನಾನು ಭಾವಿಸುತ್ತೇನೆ. ಹಿಂದೆ ನಾವೂ ಅಧಿಕಾರದಲ್ಲಿದ್ದೆವು. ಕರ್ತವ್ಯವನ್ನು ನಿರ್ವಹಿಸಬೇಕಾಗಿರುವುದು ಅತಿ ಅವಶ್ಯಕ. ಆದರೆ ಇವತ್ತಿನ ದಿವಸ, ಆ ಕರ್ತವ್ಯ ನಿರ್ವಹಿಸದಿದ್ದರೆ ನಾವು ಸರ್ಕಾರಿ ನೌಕರರಿಗೆ dereliction of duty ಎಂದು ಹೇಳುತ್ತೇವೆ. ಕೆಲಸ ನಿರ್ವಹಿಸದಿದ್ದರೆ ನಾವು ಸರ್ಕಾರಿ ನೌಕರರಿಗೆ dereliction of duty ಎಂದು ಹೇಳುತ್ತೇವೆ. ಕೆಲಸ ಮಾಡಬೇಕಾಗಿತ್ತು, ಕರ್ತವ್ಯ ಮಾಡಬೇಕಾಗಿತ್ತು ಅವರಿಗೆ ಚಾರ್ಜ್‌ಶೀಟ್ ಕೊಡುವ ಸಂದರ್ಭದಲ್ಲಿ dereliction of duty ಎಂದು ಹೇಳಿ ಸಾಮಾನ್ಯವಾಗಿ ಸೇರಿಸುತ್ತೇವೆ. ಆದರೆ ಸರ್ಕಾರಗಳೇ dereliction of duty ಮಾಡಿದರೆ, ಸರ್ಕಾರದಲ್ಲಿ ಯಾರಿರುತ್ತಾರೋ ಅವರೂ ಕೂಡ dereliction of dutyಗೆ ಒಳಗಾಗಬೇಕಾಗುತ್ತದೆ. ಅವರು ಮೇಲೆ ಕೂಡ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಅದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೆ, ಅಂತಹ ಕಾನೂನನ್ನು ಈ ದೇಶದಲ್ಲಿ ತರಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ನಾಗಪ್ಪನವರನ್ನು ನಾನು ಬಹಳ ಚೆನ್ನಾಗಿ ಬಲ್ಲೆ. ಅವರು ನಮ್ಮ ಜೊತೆಯಲ್ಲಿ ಮಂತ್ರಿಗಳಾಗಿದ್ದವರು. ಅನೇಕ ಸ್ನೇಹಿತರು ಅವರ ಬಗ್ಗೆ ಹೇಳಿದ್ದಾರೆ. ಅವರು ಸತ್ತಂತಹ ಸಂದರ್ಭದಲ್ಲಿ ಇಲ್ಲದಿರುವ ಗುಣವಾಚಕಗಳನ್ನು ನಾವು ಪ್ರಯೋಗ ಮಾಡುವುದು, ಹೇಳುವುದು ವಾಡಿಕೆ. ಆದರೆ ಈ ಸಂದರ್ಭದಲ್ಲಿ ಮಾನ್ಯ ನಾಗಪ್ಪನವರ ವಿಚಾರದಲ್ಲಿ ವಾಡಿಕೆಗೆ ವ್ಯತಿರಿಕ್ತವಾಗಿ ಅನೇಕ ಸ್ನೇಹಿತರುಗಳೇನು ಹೇಳಿದ್ದಾರೆ ಅದೆಲ್ಲವೂ ಕೂಡ ನೂರಕ್ಕೆ ನೂರರಷ್ಟು ಸತ್ಯ. ಅವರ ಕ್ಷೇತ್ರದಲ್ಲಿ ಒಂದು ಘಟನೆ ನಡೆಯಿತು. ಬಂಡಳ್ಳಿ ಎನ್ನುವ ಗ್ರಾಮದಲ್ಲಿ ಒಂದು ಘಟನೆ ನಡೆಯಿತು. ಇಬ್ಬರು ಪೊಲೀಸರು ಗುಂಡಿಗೆ ಬಲಿಯಾದರು. ಆ ಸಂದರ್ಭದಲ್ಲಿ ನಾನೂ ಸ್ಥಳದಲ್ಲಿದ್ದೆ. ಪೊಲೀಸ್ ಸ್ಟೇಷನ್ ಎದುರುಗಡೆ ಒಬ್ಬರು ಒಂದು ದಿವಸ ರಾತ್ರಿ ಸತ್ಯಾಗ್ರಹ ಮಾಡುತ್ತಿದ್ದರು. ಅವರ ಜೊತೆಯಲ್ಲಿ ನಾನೂ ಭಾಗವಹಿಸಿದ್ದೆ. ನಾನು ಆ ಪೊಲೀಸರ ಬಗ್ಗೆ ತೀವ್ರವಾಗಿ ಮಾತನಾಡಿದೆನೇ ವಿನಃ ಅಂತಹ ಸಂದರ್ಭದಲ್ಲೂ ಮಾನ್ಯ ನಾಗಪ್ಪನವರು ಒಂದು ಚಕಾರ ಎತ್ತಲಿಲ್ಲ. ತೀವ್ರವಾದ ಮಾತನ್ನೂ ಆಡದೇ ಸೌಮ್ಯವಾಗಿದ್ದರು. ಅಂತಹ ಸಂದರ್ಭದಲ್ಲಿ ಕೂಡ ತಮ್ಮ ಸೌಮ್ಯತನವನ್ನು ಅವರು ಮೆರೆದಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅಂತಹ ಸೌಮ್ಯ ಸ್ವಭಾವದ ವ್ಯಕ್ತಿ ನಮ್ಮ ಮುಂದೆ ಇಲ್ಲ. ಅವರ ಸಾವಿನಿಂದ ನಾವು ಅನೇಕ ಪಾಠಗಳನ್ನು ಕಲಿಯಬೇಕಾದ ಅವಶ್ಯಕತೆ ಇದೆ. ನಾನು ಹೇಳಿರುವ ಕೆಲವು ಸಲಹೆಗಳನ್ನು ಸರ್ಕಾರ ತೀವ್ರವಾಗಿ ಗಮನಿಸಿ, ಕಾರ್ಯಪ್ರವೃತ್ತವಾದರೆ ಅದು ನಿಜವಾದ ಶ್ರದ್ಧಾಂಜಲಿ ಮಾನ್ಯ ನಾಗಪ್ಪನವರಿಗೆ ಆಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಈ ಸಂದರ್ಭದಲ್ಲಾದರೂ ಕೂಡ ಈ ಸಲಹೆಗಳ ಬಗ್ಗೆ ತೀವ್ರವಾಗಿ ಗಮನ ಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಮಾನ್ಯ ಅನಂತಕೃಷ್ಣರವರ ಬಗ್ಗೆ ಹೇಳುವುದಾದರೆ, ಅವರು ಒಬ್ಬ ಸಮಾಜವಾದಿಯಾಗಿದ್ದರು. ನಮ್ಮ ಸ್ನೇಹಿತರು ಹೇಳಿದ ಹಾಗೆ ಬೆಂಗಳೂರು ನಗರವನ್ನು ಸುಂದರಗೊಳಿಸುವ, ಅಭಿವೃದ್ಧಿಗೊಳಿಸುವ ಕಳಕಳಿಯನ್ನು ಇಟ್ಟುಕೊಂಡಿದ್ದವರು. ಅವರ ಕ್ಷೇತ್ರದಲ್ಲಿ ಆಟದ ಮೈದಾನವಾಗಿದ್ದ ಒಂದು ಪಾರ್ಕ್ ಅನ್ನು ಕಮರ್ಷಿಯಲ್ ಕಾಂಪ್ಲೆಕ್ಸ್ ಆಗಿ ಕನ್‌ವರ್ಟ್ ಮಾಡುವ ಪ್ರಯತ್ನ ನಡೆಯಿತು. ಅದನ್ನು ತೀವ್ರವಾದ ಪ್ರಯತ್ನ ನಡೆಸಿ ವಿರೋಧವನ್ನು ವ್ಯಕ್ತಪಡಿಸಿ ಅದನ್ನು ಉಳಿಸಿ ಈ ಬೆಂಗಳೂರು

ನಗರವನ್ನು ಸುಂದರವಾಗಿಡಬೇಕೆಂಬ ಕಲ್ಪನೆ ಏನಿತ್ತು, ಆ ಕಲ್ಪನೆ ಕೇವಲ ಕಲ್ಪನೆಯಾಗಿರದೇ ಅದನ್ನು ಕಾರ್ಯಗತ ಮಾಡುವುದರಲ್ಲಿ ಕೂಡ ಶ್ರದ್ಧೆ ವಹಿಸಿದ್ದರು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಾನ್ಯ ಜೆ.ಡಿ. ಸೋಮಪ್ಪನವರು ನಮ್ಮ ಜೊತೆಯಲ್ಲಿ ಈ ಸದನದಲ್ಲಿ ಕೆಲಸ ಮಾಡಿದ್ದವರು. ರೈತರ ಬಗ್ಗೆ, ಪ್ಲಾಂಟೇಷನ್ ಬೆಳೆಗಳ ಬಗ್ಗೆ ವಿಶೇಷವಾದ ಕಾಳಜಿ ವಹಿಸಿದ್ದರು. ಶ್ರೀಮತಿ ಅನ್ನಪೂರ್ಣದೇವಿಯವರಿಗೂ ನಮ್ಮ ಜಿಲ್ಲೆಗೂ ಬಹಳ ಸಂಬಂಧ. ಅವರು ನಮ್ಮ ಜಿಲ್ಲೆಯಲ್ಲಿ ಅಲ್ಲದೆ ಸ್ವಾತಂತ್ರ್ಯ ಪೂರ್ವದಲ್ಲಿ, ಸ್ವಾತಂತ್ರ್ಯ ನಂತರದಲ್ಲೂ ಸಹ ರಾಜ್ಯಕ್ಕೆ ಅಮೋಘವಾದ ಸೇವೆ ಸಲ್ಲಿಸಿರುವವರು. ಉಳಿದಂತೆ, ಉಳಿದ ಎಲ್ಲರ ಆತ್ಮಕ್ಕೆ ಚಿರಶಾಂತಿ ದೊರಕಲೆಂಬ ಆಶಯವನ್ನು ವ್ಯಕ್ತಪಡಿಸಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಂತೇಮಾರನಹಳ್ಳಿ ಕ್ಷೇತ್ರದ ಶಾಸಕರಾದ ಮಾನ್ಯ ಕೃಷ್ಣಮೂರ್ತಿರವರು ಮಾತನಾಡಲಿ.

†ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರುವ ಸಂತಾಪ ಸೂಚನೆಗೆ ಪೂರಕವಾಗಿ ನಮನಗಳನ್ನು ಸಲ್ಲಿಸುತ್ತಾ ಈ ದಿವಸ ರಾಜ್ಯದ ಈ ಸದನವನ್ನು ಪ್ರತಿನಿಧಿಸಿದ್ದ ಏಳು ಜನ ಹಿರಿಯ ಸದಸ್ಯರನ್ನು ನಾವು ಕಳೆದುಕೊಂಡಿದ್ದೇವೆ. ಅದರಲ್ಲಿ ಬಹಳ ಪ್ರಾಮುಖ್ಯವಾಗಿ, ನಾನು ಕಂಡಂತಹ ಶ್ರೀ ಹೆಚ್. ನಾಗಪ್ಪನವರು ಒಬ್ಬರಾಗಿದ್ದರು. ಬಹಳ ಸೌಮ್ಯ ಸ್ವಭಾವದ ಶ್ರೀ ಹೆಚ್. ನಾಗಪ್ಪನವರು ಬಹಳ ನಿಗೂಢವಾಗಿ ಹತ್ಯೆಗೊಳಗಾಗಿದ್ದಾರೆ. ನಾನು 1994ರಲ್ಲಿ ಈ ಸದನವನ್ನು ಪ್ರವೇಶ ಮಾಡಿದಾಗ, ಅವರು ಹಿರಿಯ ಸದಸ್ಯರಾಗಿದ್ದರು. ನಾನು ಅವರನ್ನು ಶಾಸಕರಾಗಿ ಮತ್ತು ರಾಜ್ಯ ಕೃಷಿ ಮಾರುಕಟ್ಟೆ ಸಚಿವರಾಗಿ ಹತ್ತಿರದಿಂದ ಬಲ್ಲವನಾಗಿದ್ದೇನೆ. ಅವರು ಹಿರಿಯ ಸದಸ್ಯರಾಗಿ, ಸಚಿವರಾಗಿ ನಮ್ಮನ್ನೆಲ್ಲಾ ಬಹಳ ಆತ್ಮೀಯತೆಯಿಂದ, ಈ ರಾಜಕೀಯ ಕ್ಷೇತ್ರದಲ್ಲಿ ಒಳ್ಳೆಯ ರಾಜಕಾರಣವನ್ನು ಮಾಡುವ ದಿಕ್ಕಿನಲ್ಲಿ ನಮ್ಮನ್ನು ಕೊಂಡೊಯ್ದಿದ್ದರು. ಅವರು ನಮ್ಮ ಜನತಾ ದಳದ ಜಿಲ್ಲಾ ಅಧ್ಯಕ್ಷರಾಗಿ ಕೂಡ ಪಕ್ಷವನ್ನು ಬಹಳ ಸದೃಢವಾಗಿ ಬಲಪಡಿಸಿದ ವ್ಯಕ್ತಿ ಅವರಾಗಿದ್ದರು. ಇವತ್ತು ಅಂತಹ ವ್ಯಕ್ತಿ ಕಾಡಿನಲ್ಲಿ ನಿಗೂಢವಾಗಿ ಹತ್ಯೆಗೀಡಾಗಿರುವುದು ಬಹಳ ದುರದೃಷ್ಟಕರ. ಹಾಗಾಗಿ ಈ ವಿಚಾರದಲ್ಲಿ ಸರ್ಕಾರ ಇವತ್ತು ಬಹಳ ತರಾತುರಿಯಲ್ಲಿ ಕ್ಯಾಬಿನೆಟ್ ಸೇರಿ ನ್ಯಾಯಾಂಗ ತನಿಖೆಗೇನು ಆದೇಶ ಮಾಡಿದೆ, ಆ ನ್ಯಾಯಾಂಗ ತನಿಖೆಯನ್ನು ಹಿಂದಕ್ಕೆ ಪಡೆದು ಈ ಒಂದು ವಿಚಾರಣೆಯನ್ನು ಸಿ.ಬಿ.ಐ.ಗೆ ವಹಿಸುವುದು ಬಹಳ ಸೂಕ್ತವೆಂದು ನನ್ನ ಅಭಿಪ್ರಾಯ. ಏಕೆಂದರೆ ನ್ಯಾಯಾಂಗ ತನಿಖೆಯಲ್ಲಿ on evidence ಈ ಒಂದು ಸಾಧಕ ಬಾಧಕಗಳನ್ನು ಕಂಡು ಹಿಡಿಯುವುದಕ್ಕೆ ಅವಕಾಶ ಇದೆ. ಆದರೆ ಸಿ.ಬಿ.ಐ.ನಲ್ಲಿ through investigationಗೆ ಅವಕಾಶವಿರುವುದರಿಂದ ಇವತ್ತು ಅವರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ, ಇದನ್ನು ಸಿ.ಬಿ.ಐ.ಗೆ ವಹಿಸುವುದು ಬಹಳ ಸೂಕ್ತ ಎನ್ನುವ ಮಾತನ್ನು ಹೇಳುತ್ತೇನೆ. ವೀರಪ್ಪನ್ ಎಷ್ಟೇ ಕ್ರೂರಿಯಾಗಿರಬಹುದು. ಆದರೆ ಕೊನೆಯಲ್ಲಿ ಅವನು ಮಾನವೀಯತೆ ತೋರಿಸಿದ್ದಾನೆ. ಆಕಸ್ಮಾತ್ ವೀರಪ್ಪನ್ ಅವರ ಆರನೇ ಕ್ಯಾಸೆಟ್‌ನಲ್ಲಿ ಈ ಎನ್‌ಕೌಂಟರ್ ವಿಚಾರವನ್ನು ಪ್ರಸ್ತಾಪ ಮಾಡದೇ ಹೋಗಿದ್ದ ಪಕ್ಷದಲ್ಲಿ

ಅವರ ಕಳೇಬರವೂ ಕೂಡ ನಮಗೆ ಸಿಗುತ್ತಿರಲಿಲ್ಲ. ಗೌರವಪೂರ್ವಕವಾಗಿ ಅವರ ಅಂತ್ಯಕ್ರಿಯೆಯನ್ನು ಮಾಡುವುದಕ್ಕೂ ಅವಕಾಶವಾಗುತ್ತಿರಲಿಲ್ಲ. ಆದರೆ ಆ ಕ್ರೂರಿ ವೀರಪ್ಪನ್‌ನಿಂದಾಗಿ ಕೊನೆಗಾದರೂ ಕೂಡ ಆ ಕುಟುಂಬ ವರ್ಗದವರಿಗೆ ಆ ಪಾರ್ಥೀವ ಶರೀರ ದೊರೆಯತಕ್ಕಂಥ ಅವಕಾಶ ಕಲ್ಪಿಸಿಕೊಟ್ಟು ಬಹಳ ಗೌರವಪೂರ್ವಕವಾಗಿ ಆ ಕ್ರಿಯೆಯನ್ನು ಮಾಡುವುದಕ್ಕೆ ಅವಕಾಶವಾಗಿದೆ. ಹೀಗಾಗಿ ಆ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಆ ಭಗವಂತನು ದಯ ಪಾಲಿಸಲಿ ಎಂದು ಹೇಳುತ್ತಾ, ಇತರೆ ವಿಚಾರಗಳನ್ನು ಚರ್ಚೆಯ ಸಂದರ್ಭದಲ್ಲಿ ಹೇಳಲು ನಾನು ತಮ್ಮ ಅವಕಾಶ ಕೇಳುತ್ತೇನೆಂದು ಮತ್ತೊಮ್ಮೆ ತಮ್ಮಲ್ಲಿ ಪ್ರಾರ್ಥಿಸಿಕೊಂಡು ಇತರೆ ಗೌರವಾನ್ವಿತ ಸದಸ್ಯರಾದ ಎ.ಕೆ. ಅನಂತ್‌ಕೃಷ್ಣರವರು, ಜೆ.ಡಿ. ಸೋಮಪ್ಪನವರು, ಹಾಗೆಯೇ ಶ್ರೀಮತಿ ಅನ್ನಪೂರ್ಣದೇವಿಯವರು, ಡಿ. ಪುಟ್ಟೇಗೌಡರವರು, ಮೊಹಸೀನ್ ಕಮಲ್‌ರವರು, ಜಿ. ಶಿವಪ್ಪನವರು, ಇವರೆಲ್ಲರೂ ಕೂಡ ಈ ರಾಜ್ಯಕ್ಕೆ ಹೆಚ್ಚಿನ ಪ್ರಮಾಣದ ಕೊಡುಗೆಯನ್ನು ನೀಡಿ ಇವತ್ತು ನಮ್ಮನ್ನು ಅಗಲಿದ್ದಾರೆ, ಅವರ ಕುಟುಂಬವರ್ಗದವರಿಗೂ ಕೂಡ ಭಗವಂತನು ಆ ದುಃಖವನ್ನು ಭರಿಸತಕ್ಕಂಥ ಶಕ್ತಿ ನೀಡಲಿ ಎಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೆ, ಸಭೆಯಲ್ಲಿ ಸಂತಾಪ ಸೂಚನೆಯನ್ನು ಮಂಡಿಸಿರುವುದನ್ನು ಬೆಂಬಲಿಸಿ, ಮನುಷ್ಯ ನೈಸರ್ಗಿಕವಾಗಿ ಹುಟ್ಟು-ಸಾವುಗಳ ಬಗ್ಗೆ ಕೆಲವೊಂದು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗುವುದಕ್ಕೆ ಅವನ ಗುಣಗಳನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಇವತ್ತು ಮಾನ್ಯ ನಾಗಪ್ಪನವರ ಸಂತಾಪ ಸೂಚನೆಯ ಬಗ್ಗೆ ಮಾತುಗಳನ್ನು ಹೇಳುವಂಥ ಸಂದರ್ಭದಲ್ಲಿ, ಅನೇಕ ಮಾನ್ಯ ಸದಸ್ಯರು ಅಜಾತಶತ್ರು ಎನ್ನುವ ಪದವನ್ನು ಉಪಯೋಗಿಸಿದರು. ವಾಸ್ತವವಾಗಿ ನಾಗಪ್ಪನವರು ಸಜ್ಜನಿಕೆಯ, ಸರಳ, ಮತ್ತು ಸರಳತನಕ್ಕೆ ಧೀಮಂಥ ವ್ಯಕ್ತಿಯಾಗಿದ್ದರು. ಅವರಿಗೆ ಎಲ್ಲರ ಜೊತೆಯಲ್ಲಿ ಬೆರೆಯುವಂಥ ಮನೋಭಾವವನ್ನು ಮೈಗೂಡಿಸಿಕೊಂಡಿದ್ದರು. 1994ರಲ್ಲಿ ಶಾಸಕರಾಗಿ ಬಂದ ಮೇಲೆ ನಾವು ಅವರ ಜೊತೆಯಲ್ಲಿ ಸುಮಾರು 12 ದಿವಸಗಳ ಕಾಲ ಅಂದಾಜು ಸಮಿತಿಯ ಜೊತೆಗೆ ಪ್ರವಾಸ ಕೈಗೊಂಡಿದ್ದೆವು. ನನಗೆ ಅನ್ನಿಸಿತು ಒಳ್ಳೆಯವರಿಂದ ಹಲವಾರು ವಿಚಾರಗಳನ್ನು ಕಲಿಯಬಹುದು, ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಸಂವಿಧಾನ ಬದ್ಧವಾಗಿ ವಿಧಾನ ಸಭೆ ನಡೆದು ಒಂದು ದುಗುಡವಾದ ಸಂತಾಪವನ್ನು ಇವತ್ತು ವ್ಯಕ್ತಪಡಿಸುತ್ತಿದ್ದೇವೆಂದು ಹೇಳಿದರೆ ಅದು ಶ್ರೀಮಾನ್ ನಾಗಪ್ಪನವರ ನಿಧನಕ್ಕೆ ಏಕೆಂದರೆ, ನಾಗಪ್ಪನವರು ಎಲ್ಲರೂ ನಿಧನ ಹೊಂದಿದಂತೆ ಹೊಂದಿದ್ದರೆ ಡಾ॥ ರಾಜ್‌ಕುಮಾರ್‌ರವರನ್ನು ಅಪಹರಿಸಿದ ನಂತರ ಬಿಡುಗಡೆಗೊಳಿಸಿದಾಗ, ನಾವು ಈ ಸರ್ಕಾರವನ್ನು ಹಾಗೂ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸಿದ್ದೆವು. ಹಾಗೆಯೇ ನಾಗಪ್ಪನವರೂ ಕೂಡ 108ನೇ ದಿನಕ್ಕೆ ಬರಬಹುದೇನೋ, ನಾಗಪ್ಪನವರನ್ನು ಸರ್ಕಾರ ಪಾರು ಮಾಡಬಹುದು, ಅದರ ಬಗ್ಗೆ ಪ್ರಯತ್ನಿಸಬಹುದೇನೋ ಎನ್ನುವ ಅನಿಸಿಕೆ ಇವತ್ತು ಸುಳ್ಳಾಗಿದೆ, ಏಕೆಂದರೆ ಅವರ ಹೆಂಡತಿ ಹಾಗೂ ಮಕ್ಕಳು, ಮುಖ್ಯಮಂತ್ರಿಗಳನ್ನು, ಗೃಹಸಚಿವರನ್ನು, ತಮಿಳುನಾಡಿನ ಮುಖ್ಯಮಂತ್ರಿ ಕು॥ ಜಯಲಲಿತಾರವರನ್ನು, ಈ ರಾಷ್ಟ್ರದ ಮಹಾನ್ ಹುದ್ದೆಯನ್ನು ಅಲಂಕರಿಸಿರುವ ವಾಜಪೇಯಿಯವರನ್ನು ಹಾಗೂ ಗೃಹಸಚಿವರನ್ನು ಭೇಟಿ ಮಾಡಿ ಸೆರಗೊಡ್ಡಿ

ಬೇಡಿಕೊಂಡಿದ್ದರು. ನಮ್ಮ ಯಜಮಾನರನ್ನು ಉಳಿಸಿಕೊಡಿ ಎಂದು ಕೇಳಿಕೊಂಡಿದ್ದರೂ ದುರಾದೃಷ್ಟವಶಾತ್ ಅವರು ವಾಪಸ್ ಬರಲಿಲ್ಲ. ನಾನು ಅಂಥ ಹಿರಿಯ ರಾಜಕಾರಣಿ ಆಗದಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿಯನ್ನು ಮಾಡುತ್ತೇನೆ, ಚರ್ಚೆ ಏನಿದ್ದರೂ ಕೂಡ ಸತ್ಯವನ್ನು ಹೊರ ತರುವ ಪ್ರಯತ್ನ ಮಾಡಬೇಕು, ಇವತ್ತು ಅಧಿಕಾರದ ಚುಕ್ಕಾಣಿಯನ್ನು ಮಾನ್ಯ ಮುಖ್ಯಮಂತ್ರಿಗಳು ಏನು ಹಿಡಿದಿದ್ದಾರೆ, ಅವರು ಆ ಕೆಲಸ ಮಾಡಬೇಕು. ಅದು ನ್ಯಾಯಾಂಗ ತನಿಖೆ ಇರಬಹುದು, ಸಿಬಿಐ ತನಿಖೆ ಇರಬಹುದು, ಸತ್ಯವನ್ನು ಹೊರಗೆಡವಿದರೆ ಇವತ್ತು ನಾವು ಏನು ಈ ಸಭೆಯಲ್ಲಿ ಸಂತಾಪ ಸೂಚನೆಯನ್ನು ಮಂಡಿಸುತ್ತಿದ್ದೇವೆ ಅದಕ್ಕೆ ಅರ್ಥ ಬರುತ್ತದೆ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನಾವು ಮುಖ್ಯಮಂತ್ರಿಗಳ ಬಗ್ಗೆ ಅಪವಾದ ಮಾಡಬಹುದು, ಚರ್ಚೆ ಬಂದಂಥ ಸಂದರ್ಭದಲ್ಲಿ ನಾವು ಅಪವಾದ ಮಾಡುತ್ತೇವೆ, ಆದರೆ ಆ ತನಿಖೆ ನಿಜವಾದ ಸತ್ಯವನ್ನು ಹೊರಗೆ ತಂದರೆ ನಾವು ಅವರನ್ನು ಅಭಿನಂದಿಸುತ್ತೇವೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುತ್ತೇನೆ. ಹಲವಾರು ಗಣ್ಯ ವ್ಯಕ್ತಿಗಳು ನಿಧನ ಹೊಂದಿದ್ದಾರೆ, ಹಾಗೆಯೇ ಮಾನ್ಯ ಜಿ. ಶಿವಪ್ಪನವರು ಇವರು ನಮ್ಮ ತಂದೆಯವರ ಸ್ನೇಹಿತರಾಗಿದ್ದವರು, ಮೊನ್ನೆ ಅವರ ನಿಧನವಾದ ವಿಚಾರ ತಿಳಿದೆ, ಅವರು ತಮ್ಮ ಮಕ್ಕಳಿಗೆ ಒಂದು ಮರಣ ಶಾಸನವನ್ನು ಬರೆದು ಹೋಗಿದ್ದಾರೆ, ಅದರಲ್ಲಿ ಏನಿದೆ ಎಂದರೆ, ಅವರ ವೈಕುಂಠ ಸಮಾರಾಧನೆಗೆ ಉಪಯೋಗ ಮಾಡುವಂಥ ಹಣವನ್ನು ಬ್ಯಾಂಕಿನಲ್ಲಿಟ್ಟು ಬಡವರ ಮಕ್ಕಳಿಗೆ ಅದನ್ನು ಉಪಯೋಗಿಸಬೇಕು ಎನ್ನುವ ಶಾಸನವನ್ನು ಬರೆದಿದ್ದಾರೆ ನಾನು ಅದನ್ನು ಮೊನ್ನೆ ಕನ್ನಡಪ್ರಭ ಪತ್ರಿಕೆಯಲ್ಲಿ ನೋಡಿದೆ. ಇವತ್ತು ಸಮಾಜದಲ್ಲಿ ರಾಜಕಾರಣಿಗಳ ಬಗ್ಗೆ ಏನೋ ಭಾವನೆ ಇದೆ, ಅವರೆಲ್ಲರೂ ಕೆಟ್ಟವರು ಎನ್ನುವ ಭಾವನೆ ಇವತ್ತು ಮೂಡುತ್ತಿದೆ, ಆದರೆ ಇವತ್ತು ರಾಜಕಾರಣಿಯಾಗಿ ಇಂಥ ಒಂದು ಕಾರ್ಯವನ್ನು ಮಾನ್ಯ ಶಿವಪ್ಪನವರು ಅವರ ಕುಟುಂಬ ವರ್ಗದವರಿಗೆ ಮಾಡಿದ್ದಾರೆ, ನಾವು ಅವರಿಗೆ ಸಂತಾಪವನ್ನು ಸೂಚಿಸಬೇಕಾಗುತ್ತದೆ. ಹಾಗೆಯೇ ಹಲವಾರು ಗಣ್ಯವ್ಯಕ್ತಿಗಳ ನಿಧನಕ್ಕೆ ಸಂತಾಪವನ್ನು ಸೂಚಿಸಿ, ಈ ಸಭೆಯಲ್ಲಿ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕೊನೆಯದಾಗಿ ಮಾತನಾಡುವವರು ಮಾನ್ಯ ಸೋಮಶೇಖರ್‌ರವರು, ಮಾನ್ಯ ವಕೀಲರು, ಮಾನ್ಯ ರಾಮದಾಸ್ ಹಾಗೂ ಮಾನ್ಯ ಮಹದೇವ್‌ರವರು ಅಷ್ಟೆ.

†ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ತಾವು ಏನು ನಮ್ಮ ವಿಧಾನ ಸಭೆಗೆ ಸದಸ್ಯರಾಗಿದ್ದಂಥ ಕೆಲವು ಗಣ್ಯ ವಕ್ತಿಗಳ ಸಾವಿನ ಬಗ್ಗೆ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ನಾನೂ ಸಹ ಭಾಗಿಯಾಗುತ್ತಾ ಕೆಲವು ವಿಚಾರಗಳನ್ನು ಹೇಳಲಿಚ್ಛಿಸುತ್ತೇನೆ. ಬಹಳ ಪ್ರಮುಖವಾಗಿ ನಾಗಪ್ಪನವರು, ಶ್ರೀ ನಾಗಪ್ಪನವರು ಮೂರು ವರ್ಷಗಳ ಹಿಂದೆ ನಮ್ಮ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿ ಸುಮಾರು ನೂರ ಆರು ದಿನಗಳ ಕಾಲ ಅವನ ಅಧೀನದಲ್ಲಿಟ್ಟುಕೊಂಡು ಇವತ್ತು ಅವರ ಶವ ನಮ್ಮ ರಾಜ್ಯಕ್ಕೆ ಬಂದಿದೆ. ನಾವು ಇಲ್ಲಿ ಒಂದು ಅಂಶವನ್ನು ಗಮನಿಸಬೇಕಾಗುತ್ತದೆ. ಎರಡು ವರ್ಷಗಳ ಹಿಂದೆ

ಡಾ॥ ರಾಜ್‌ಕುಮಾರ್ ಅವರನ್ನು ಅದೇ ವೀರಪ್ಪನ್ ಅಪಹರಿಸಿ, ಅವರನ್ನೂ ಸಹ ನೂರ ಆರು ದಿನಗಳ ಕಾಲ ಇಟ್ಟು ಕೊಂಡು, ಆ ಮೂರು ತಿಂಗಳ ಕಾಲ ನಮ್ಮ ರಾಜ್ಯ ಗೊಂದಲಿನಲ್ಲಿ ಸಿಕ್ಕಿಹಾಕಿಕೊಂಡು ಕೊನೆಗೆ ಯಾವುದೋ ರೀತಿಯಲ್ಲಿ ಬಿಡುಗಡೆಯಾಯಿತು, ಯಾವ ರೀತಿ ಬಿಡುಗಡೆಯಾಯಿತೋ ಗೊತ್ತಿಲ್ಲ ಅದು ಬೇರೆ ವಿಚಾರ, ಸರ್ಕಾರ ಆ ವಿಚಾರದಲ್ಲಿ ಒಂದು ರೀತಿಯಲ್ಲಿ ಯಶಸ್ವಿಯಾಯಿತು, ಅವರನ್ನು ವೀರಪ್ಪನ್ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸುವ ಸಾಧನೆ ಮಾಡಿ ಅದರ ಬಗ್ಗೆ ವಿಧಾನ ಸಭೆಯಲ್ಲಿ ಮತ್ತು ಹೊರಗಡೆ ಅಭಿನಂದನೆಯನ್ನು ಸಲ್ಲಿಸಿಕೊಂಡಿತು. ಎರಡು ವರ್ಷಗಳ ನಂತರ ನಮ್ಮ ಕುಟುಂಬ ಸದಸ್ಯರಾಗಿದ್ದಂಥಾ ರಾಜಕಾರಣಿಯ ಅಂದರೆ ಮಾಜಿ ಮಂತ್ರಿಗಳ ಅಪಹರಣ ಆಗಿದ್ದು, ಅವರನ್ನು ಬಿಡುಗಡೆ ಮಾಡಿಸುತ್ತಾರೆ ಎನ್ನುವ ನಿರೀಕ್ಷೆ ಇತ್ತು. ಅವರನ್ನು ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ಸರ್ಕಾರ ವಿಫಲವಾಗಿದೆ. ಅದರ ಬದಲಾಗಿ ಅವರ ಹೆಣ ಬಹಳ ನಿಗೂಢ ರೀತಿಯಲ್ಲಿ ಸಿಕ್ಕಿದೆ. ಇವೆರಡಕ್ಕೂ ವ್ಯತ್ಯಾಸವನ್ನು ನೋಡಿದರೆ ನಮಗೆ ಪ್ರಜಾಪ್ರಭುತ್ವದಲ್ಲಿ ಒಂದು ರೀತಿಯ ಅನುಮಾನ ಬರುತ್ತದೆ.

12.30 ಪಿಎಂ

ಇವತ್ತಿನ ದಿವಸ ನಮ್ಮ ನಾಯಕರ ಜೀವನ ಬಹಳಷ್ಟು ಹಗುರವಾಗಿ ಬಿಟ್ಟಿದೆ. ನಾವೇ ಅವರಿಗೆ ರಕ್ಷಣೆ ಕೊಡುವುದಕ್ಕೆ ಆಗುತ್ತಿಲ್ಲ. ಇದು ಯಾವ ವ್ಯವಸ್ಥೆ ಎಂದು ನಾವೇ ನಿಜವಾಗಿಯೂ ಕೂಡ ದುಃಖ ಪಡಬೇಕಾಗುತ್ತದೆ. ಶ್ರೀಯುತರ ಕ್ಷೇತ್ರದಲ್ಲಿರುವ ಬಂಡಳ್ಳಿಯಲ್ಲಿ ಎರಡು ಫೈರಿಂಗ್ ಕೇಸ್ ಆಗಿತ್ತು. ಆ ಸಂದರ್ಭದಲ್ಲಿ ನಾವು ಕೂಡ ಹೋಗಿದ್ದೆವು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ನಾಗಪ್ಪನವರೂ ಕೂಡ ಹೋರಾಟ ಮಾಡಿದ್ದರು. ಈ ಘಟನೆ ಆದಮೇಲೆ ಇದೇ ಕ್ಷೇತ್ರದಲ್ಲಿ ಎರಡು ಅಪಹರಣ ಘಟನೆಗಳಾದವು. ಈ ಸಂದರ್ಭದಲ್ಲಿ ಮಂತ್ರಿಗಳನ್ನೂ ಸಹ ಊರಿಗೆ ಬಿಟ್ಟು ಕೊಟ್ಟಿರಲಿಲ್ಲ. ಇದೇ ರೀತಿಯಾಗಿ ಬೇರೆ ಬೇರೆ ಘಟನೆಗಳು ಅಲ್ಲಿ ನಡೆದಿವೆ. ಆದ್ದರಿಂದ, ಈ ಒಂದು ಕ್ಷೇತ್ರದಲ್ಲಿ ಸರ್ಕಾರ ಇದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದು ಮತ್ತು ಇಲ್ಲಿ ಆಡಳಿತ ಯಾವ ರೀತಿ ನಡೆಯುತ್ತಿದೆ ಎಂದು ನನಗನ್ನಿಸುತ್ತದೆ. ಅಲ್ಲಿರತಕ್ಕಂಥ ಜನರ ಪರಿಸ್ಥಿತಿ ಯಾವ ರೀತಿ ಇದೆ ಎನ್ನತಕ್ಕಂಥದ್ದನ್ನು ನಾನು ಬಹಳ ನೋವಿನಿಂದ ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ನನ್ನ ಒಂದು ಅನಿಸಿಕೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಈ ಒಂದು ಪ್ರದೇಶವನ್ನು ಡಿಸ್ಟ್ರರ್ಬ್ ಏರಿಯಾ ಎಂದು ಘೋಷಣೆ ಮಾಡಬೇಕು ಎನ್ನತಕ್ಕಂಥದ್ದನ್ನು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ, ಅಲ್ಲಿ ಯಾರಿಗೂ ಕೂಡ ರಕ್ಷಣೆ ಸಿಗುತ್ತಿಲ್ಲ. ಮಂತ್ರಿಗಳೂ ಕೂಡ ಬಿಡುಗಡೆ ಮಾಡುವುದಕ್ಕೆ ಆಗಲಿಲ್ಲ. ಆದ್ದರಿಂದ, ಇಂಥ ಒಂದು ಪರಿಸ್ಥಿತಿಯಲ್ಲಿ ಇದನ್ನು ಡಿಸ್ಟ್ರರ್ಬ್ ಏರಿಯಾ ಎಂದು ಘೋಷಣೆ ಮಾಡಿ ಕೇಂದ್ರಕ್ಕೆ ವಹಿಸಿಕೊಡತಕ್ಕಂಥದ್ದು ಬಹಳ ಮುಖ್ಯ. ಹಾಗೆಯೇ ವೀರಪ್ಪನ್‌ನ್ನು ಹಿಡಿಯುವಲ್ಲಿಯೂ ಕೂಡ ಸರ್ಕಾರ ವಿಫಲವಾಗಿದೆ. ಆದ್ದರಿಂದ, ಈ ಒಂದು ಕಾರ್ಯವನ್ನು ಕೇಂದ್ರಕ್ಕೆ ವಹಿಸಿಕೊಡತಕ್ಕಂಥದ್ದು ಸೂಕ್ತವೆಂದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಮಾನ್ಯ ನಾಗಪ್ಪನವರ ನಿಗೂಢ ಸಾವಿನ ಬಗ್ಗೆ ನಾಳೆ ಅಥವಾ ನಾಡಿದ್ದು ತಾವು ಅನುಮತಿ ಕೊಟ್ಟಂಥ ಸಂದರ್ಭದಲ್ಲಿ ಸದರಿ ವಿಷಯದ ಬಗ್ಗೆ ನಾನು

ಮಾತನಾಡುತ್ತೇನೆ. ಒಟ್ಟಿನಲ್ಲಿ ಮಾನ್ಯ ನಾಗಪ್ಪನವರಿಗೆ ಇಂಥ ಸಾವು ಬರಬಾರದಿತ್ತು. ಶ್ರೀಯುತರು ಸಹಜವಾಗಿ ಸತ್ತಿದ್ದರೆ ಇಷ್ಟೊಂದು ನೋವು ಆಗುತ್ತಿರಲಿಲ್ಲ. ನನಗೆ ತಿಳಿದ ಮಟ್ಟಿಗೆ ಶ್ರೀಯುತರಿಗೆ ಯಾರೂ ವೈರಿಗಳು ಇರಲಿಲ್ಲ. ಕಾನ್ಸ್‌ಟೇಬಲ್‌ಗಳನ್ನು ಆಗಲಿ ಅಥವಾ ಸಣ್ಣ ಅಧಿಕಾರಿಗಳನ್ನಾಗಲಿ ಬಹಳ ಗೌರವದಿಂದ ಮಾತನಾಡಿಸುತ್ತಿದ್ದಂಥ ವ್ಯಕ್ತಿ ಆಗಿದ್ದರು. ಹಾಗೆಯೇ ಬಹಳ ನಮ್ರತೆಯಿಂದ ನಡೆದುಕೊಳ್ಳತಕ್ಕಂಥ ವ್ಯಕ್ತಿಯಾಗಿದ್ದರು. ಶ್ರೀಯುತರು ಯಾವುದೇ ವ್ಯಕ್ತಿಯನ್ನು ಏಕವಚನದಿಂದ ಮಾತನಾಡಿಸುತ್ತಿರಲಿಲ್ಲ. ಶ್ರೀಯುತರು ಬಹಳ ಒಳ್ಳೆಯ ವ್ಯಕ್ತಿಯಾಗಿದ್ದರು. ಅವರು ಈ ರೀತಿಯಾಗಿ ಸತ್ತಿರತಕ್ಕಂಥದ್ದು ನಮಗೆ ಬಹಳಷ್ಟು ನೋವಾಗಿದೆ. ಅವರ ಕುಟುಂಬದವರು 106 ದಿವಸಗಳ ಕಾಲ ಯಾವ ರೀತಿಯಾಗಿ ಯಾತನೆ ಅನುಭವಿಸಿದ್ದಾರೆ ಎನ್ನತಕ್ಕಂಥದ್ದು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಶ್ರೀಯುತರ ಕುಟುಂಬದವರು, ಅಂದರೆ, ಮಕ್ಕಳು, ಅಳಿಯಂದಿರು ಮತ್ತು ಶ್ರೀಮತಿ ನಾಗಪ್ಪನವರು 106 ದಿವಸಗಳ ಕಾಲ ಅನೇಕ ದೇವರುಗಳಿಗೆ ಮತ್ತು ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಮಾನ್ಯ ಉಪ ಪ್ರಧಾನ ಮಂತ್ರಿಗಳು ಹಾಗೂ ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಗಳು ಮತ್ತು ಶ್ರೀಮತಿ ಸೋನಿಯಾಗಾಂಧಿರವರ ಹತ್ತಿರ ದುಂಬಾಲು ಬಿದ್ದು ಶ್ರೀಯುತರನ್ನು ಉಳಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನ ಪಟ್ಟಿದ್ದಾರೆ. ಆದರೆ, ಯಾರೂ ಕೂಡ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಶ್ರೀಯುತರ ಸಾವು ನಿಜವಾಗಿಯೂ ಕೂಡ ನಮ್ಮೆಲ್ಲರಿಗೂ ದುಃಖವನ್ನು ತಂದಿದೆ. ಅವರ ಕುಟುಂಬದವರಿಗೆ ಈ ಒಂದು ನಷ್ಟವನ್ನು ತುಂಬಿಕೊಳ್ಳತಕ್ಕಂಥ ಶಕ್ತಿಯನ್ನು ಭಗವಂತನು ನೀಡಲೆಂದು ಹೇಳುತ್ತಾ ಶ್ರೀಯುತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣರವರಿಗೂ ಮತ್ತು ನನಗೂ ಕೂಡ ಬಹಳ ವಿಶ್ವಾಸ ಇತ್ತು. ಶ್ರೀಯುತರು ಯಾವುದೇ ಪಕ್ಷದಲ್ಲಿದ್ದರೂ ಕೂಡ ನಾವಿಬ್ಬರೂ ಒಂದೇ ಕುಟುಂಬದ ಸದಸ್ಯರಾಗಿದ್ದೆವು. ಈ ವಯಸ್ಸಿನಲ್ಲಿಯೂ ಕೂಡ ಶ್ರೀಯುತರು ಕ್ರಿಯಾಶೀಲ ವ್ಯಕ್ತಿ ಆಗಿದ್ದರು. ಅವರು ಬೆಂಗಳೂರು ನಗರ ಪಾಲಿಕೆಯ ಮೇಯರ್ ಆಗಿದ್ದಂಥ ಸಂದರ್ಭದಲ್ಲಿ ಒಂದು ಉತ್ತಮವಾದಂಥ ಛಾಪುವನ್ನು ಬೆಂಗಳೂರು ನಗರದಲ್ಲಿ ಸೃಷ್ಟಿ ಮಾಡಿದ್ದರು. ಶ್ರೀಯುತರು ವಿದ್ಯಾರ್ಹತೆಯಲ್ಲಿ ದೊಡ್ಡ ಪದವೀಧರರೇನೂ ಆಗಿರಲಿಲ್ಲ. ಅವರು ಕೇವಲ ಎಸ್.ಎಸ್.ಎಲ್.ಸಿ ಓದಿದ್ದರಷ್ಟೆ. ಆದರೆ, ಪಿ.ಹೆಚ್.ಡಿ ಮಾಡಿದವರಿಗೂ ಇಷ್ಟೊಂದು ಬುದ್ಧಿ ಇರುತ್ತಿರಲಿಲ್ಲ. ಅವರಿಗೆ ಒಳ್ಳೆಯ ಮೇಧಾವಿ ಶಕ್ತಿ ಇತ್ತು. ಕೋಲಾರ ಜಿಲ್ಲೆಯವರೆಲ್ಲರೂ ಕೂಡ ಬುದ್ಧಿವಂತರಿದ್ದಾರೆ. ಸರ್.ಎಂ. ವಿಶ್ವೇಶ್ವರಯ್ಯನವರು ಕೂಡ ಇದೇ ಜಿಲ್ಲೆಯವರಾಗಿದ್ದಾರೆ. ಶ್ರೀಯುತರು ನಿಷ್ಠೂರವಾದಿಗಳು, ಮತ್ತು ನೇರವಾಗಿ ಮಾತನಾಡುತ್ತಿದ್ದರು. ಇವರು ಯಾವಾಗಲೂ ಕೂಡ ಒಳ್ಳೆಯ ಜನರ ಸಹವಾಸವನ್ನು ಮಾಡಿಕೊಳ್ಳುತ್ತಾ ಬರುತ್ತಿದ್ದರು. ಶ್ರೀಯುತರು ಒಂದು ಸಾರಿ ಅಂದರೆ, 1989 ರಿಂದ 1994ರ ಅವಧಿಯವರೆಗೆ ಶಾಸಕರಾಗತಕ್ಕಂಥ ಅವಕಾಶ ಸಿಕ್ಕಿತು. ಶ್ರೀಯುತರು ಸಮಾಜವಾದಿಗಳು, ಮತ್ತು ಪಿ.ಎಸ್.ಪಿ.ಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಶ್ರೀ ಗುರುಸ್ವಾಮಿ ಮತ್ತು ಇವರೆಲ್ಲರೂ ಕೂಡ ಒಂದೇ ಪಕ್ಷದಲ್ಲಿದ್ದಂಥವರು. ಹಾಗೆಯೇ ಸಮಾಜವಾದದಲ್ಲಿ ನಂಬಿಕೆ ಇಟ್ಟುಕೊಂಡಂಥ ವ್ಯಕ್ತಿಯಾಗಿದ್ದರು. ಶ್ರೀಯುತರ ಸಾಲಿನಿಂದ ವೈಯುಕ್ತಿಕವಾಗಿ ನನಗೆ ನೋವಾಗಿದೆ. ಹಾಗೆಯೇ ಶ್ರೀ ಜೆ.ಡಿ. ಸೋಮಪ್ಪನವರು ಮತ್ತು

ಶ್ರೀ ಜಿ. ಶಿವಪ್ಪನವರು ಹಾಗೂ ಶ್ರೀ ಮೊಹಸೀನ್ ಕಮಲ್, ಶ್ರೀ ಡಿ. ಪುಟ್ಟೇಗೌಡ ಮತ್ತು ಶ್ರೀಮತಿ ಎನ್. ಅನ್ನಪೂರ್ಣದೇವಿಯವರಿಗೂ ಸಹ ಈ ಸಂದರ್ಭದಲ್ಲಿ ಸಂತಾಪ ಸೂಚನೆಯನ್ನು ವ್ಯಕ್ತಪಡಿಸುತ್ತೇನೆ. ಹಾಗೆಯೇ ಶ್ರೀಯುತ ಕೆ. ಶಾಮರಾವ್‌ರವರು ಪತ್ರಿಕಾ ರಂಗದಲ್ಲಿ ಭೀಷ್ಮರೆನಿಸಿದ್ದವರು. ಇವರು 87 ವರ್ಷಗಳ ಕಾಲ ಬದುಕಿದ್ದರು. ಸುಮಾರು 50 ರಿಂದ 60 ವರ್ಷಗಳ ಕಾಲ ಪತ್ರಿಕಾ ರಂಗದಲ್ಲಿ ಸೇವೆ ಮಾಡಿದ್ದಾರೆ. ಪತ್ರಿಕೆಯಲ್ಲಿ ಯಾವಾಗಲೂ ಕೂಡ ಸತ್ಯವನ್ನೇ ಬರೆಯುವಂಥ ಎದೆಗಾರಿಕೆ ಇದ್ದಂಥವರು. ತುರ್ತು ಪರಿಸ್ಥಿತಿಯಲ್ಲಿ ನಮ್ಮ ರಾಜ್ಯಕ್ಕೆ ಪತ್ರಿಕೋದ್ಯಮದ ಮೂಲಕ ಕೊಟ್ಟಂಥ ಕೊಡುಗೆ ನಿಜವಾಗಿಯೂ ಕೂಡ ಮರೆಯಲಾಗದೆ ಇರತಕ್ಕಂಥ ಒಂದು ಕೊಡುಗೆಯಾಗಿದೆ. ಶ್ರೀಯುತರ ಸಾವಿನಿಂದ ಇಡೀ ಪತ್ರಿಕಾ ರಂಗಕ್ಕೆ ತುಂಬಲಾರದಂಥ ನಷ್ಟವಾಗಿದೆ. ಇನ್ನು ರೈಲ್ವೆ ದುರಂತದಲ್ಲಿ 20 ಜನರು ಸಾವನ್ನಪ್ಪಿದ್ದಾರೆ. ಇದರಲ್ಲಿ ನಮ್ಮ ರಾಜ್ಯದ ನಾಲ್ಕೈದು ಜನರು ಸತ್ತಿರತಕ್ಕಂಥದ್ದು ಕೂಡ ನಿಜವಾಗಿಯೂ ಕೂಡ ದುಃಖ ತಂದಿದೆ. ಈ ಸಂದರ್ಭದಲ್ಲಿ ಇವರೆಲ್ಲರ ಆತ್ಮಕ್ಕೆ ಶಾಂತಿ ಕೋರುತ್ತಾ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಇವತ್ತಿನದಿವಸ ಮನುಷ್ಯನಾಗಿ ಹುಟ್ಟಿದಮೇಲೆ ಸಾವು ನಿಶ್ಚಿತವಾಗಿರುತ್ತದೆ. ಇದಕ್ಕೆ ಸಂಬಂಧಪ್ಪಟಂತೆ ಬಸವಣ್ಣನವರು ಏನು ಹೇಳಿದ್ದಾರೆ ಎಂದರೆ,

"ನೆರೆ ಕೆನ್ನೆಗೆ ನೆರೆಗಲ್ಲಕ್ಕೆ
ಶರೀರ ಗೂಡು ಹೋಗದ ಮುನ್ನ
ಕಾಲಮೇಲೆ ಕೈಯನೂರಿ
ಕೋಲ ಹಿಡಿಯದ ಮುನ್ನ
ಮೃತ್ಯು ಮುಟ್ಟದ ಮುನ್ನ
ಪೂಜಿಸು ನಮ್ಮ ಕೂಡಲ ಸಂಗಮದೇವನ"

ಎಂದು ಬಸವಣ್ಣನವರು ಹೇಳಿದ್ದಾರೆ. "ಪೂಜಿಸು ಕೂಡಲ ಸಂಗಮದೇವನ" ಎಂದರೆ, ಸತ್ಯ ಶೋಧನೆಗಾಗಿ ಮತ್ತು ಸಮಾಜದ ಸೇವೆಗಾಗಿ ಕೆಲಸ ಮಾಡಬೇಕೆಂದು ಬಸವಣ್ಣನವರು ಹೇಳಿದ್ದಾರೆ. ದಿವಂಗತರಾಗಿರತಕ್ಕಂಥ ಎಲ್ಲಾ ಮಾನ್ಯ ವ್ಯಕ್ತಿಗಳೂ ಕೂಡ ಸಮಾಜದಲ್ಲಿ ದುಡಿದಿದ್ದಾರೆ. ಇಂಥವರ ಸಾವು ನಮ್ಮೆಲ್ಲರಿಗೂ ದಿಗ್ಭ್ರಮೆ ಉಂಟು ಮಾಡಿದೆ. ಇವರ ಕುಟುಂಬದವರಿಗೆ ಸಾವಿನಿಂದ ಆಗಿರತಕ್ಕಂಥ ಆಘಾತವನ್ನು ತಡೆದುಕೊಳ್ಳತಕ್ಕಂಥ ಶಕ್ತಿಯನ್ನು ದೇವರು ಕೊಡಲೆಂದು ಈ ವೇದಿಕೆಯ ಮುಖಾಂತರ ದೇವರಲ್ಲಿ ಬೇಡಿಕೊಳ್ಳುತ್ತೇನೆ.

ಶ್ರೀ ಮೊಹಸೀನ್ ಕಮಲ್‌ರವರು ಬೀದರ್ ಜಿಲ್ಲೆಗೆ ಸಂಬಂಧಪಟ್ಟವರು. ಶ್ರೀಯುತರು ಅಲ್ಪಸಂಖ್ಯಾತರ ಮುಖಂಡರು ಮತ್ತು ಪತ್ರಕರ್ತರಾಗಿದ್ದರು. ಇದೆಲ್ಲಕ್ಕಿಂಥ ಹೆಚ್ಚಾಗಿ ಇವರು

ಕವಿಗಳಾಗಿದ್ದರು. ಶ್ರೀಯುತರು ಬರೆದಂಥ ಎರಡು ಉರ್ದು ಕವಿತೆಗಳು ಪ್ರಕಾಶನಗೊಂಡಿವೆ. ಇವರು ತುಂಬಾ ಒಳ್ಳೆಯ ವ್ಯಕ್ತಿಯಾಗಿದ್ದರು ಮತ್ತು ಸ್ನೇಹಮಯಿಗಳಾಗಿದ್ದರು. ಇವರು ಬಹಳ ದಿವಸಗಳಿಂದ ಬೇನೆಯಿಂದ ಬಳಲುತ್ತಿದ್ದರು. ಇವತ್ತು ಸಾಯುವುದಕ್ಕಿಂತ ಮೊದಲು ನಾವೆಲ್ಲರೂ ಒಂದು ಕಡೆ ಕುಳಿತುಕೊಂಡಂಥ ಸಂದರ್ಭದಲ್ಲಿ ಅವರು ಉರ್ದುವಿನ ಒಂದು ಕವಿತೆಯನ್ನು ಹೇಳುತ್ತಿದ್ದರು. ಅದೇನೆಂದರೆ ನಾನು ಸತ್ತರೂ ಕೂಡ ನನ್ನನ್ನು ಸ್ಮಶಾನದಲ್ಲಿ ಹೂತಿದ್ದರೂ ಕೂಡ ನಿಮ್ಮೆಲ್ಲರ ನೆನಪು ಬಂದು ಕಾಡುತ್ತದೆ ಎನ್ನತಕ್ಕಂಥದ್ದನ್ನು ಉರ್ದುವಿನಲ್ಲಿ ಹೇಳಿದ್ದರು. ಆ ಕವಿತೆಯನ್ನು ಈ ಸಂದರ್ಭದಲ್ಲಿ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ

(ಮಾನ್ಯ ಸದಸ್ಯರು ಉರ್ದು ಭಾಷೆಯಲ್ಲಿ ಕವನವನ್ನು ವಾಚಿಸಿದರು). ಯಾರು ನಿನಗೆ ಈ ಅಡ್ರಸ್ ಕೊಟ್ಟರೂ ನೀನು ಇಲ್ಲಿಗೆ ಬಂದು ನನಗೆ ಸತಾಯಿಸುತ್ತಿದ್ದೀಯಾ ಮತ್ತು ಸಂಕಟ ಕೊಡುತ್ತಿದ್ದೀಯಾ ಎಂದು ಕವಿತೆಯಲ್ಲಿ ಹೇಳಿದ್ದಾರೆ. ನಾನು ಸತ್ತ ಮೇಲೂ ಕೂಡ ನಿಮ್ಮೆಲ್ಲರ ನೆನಪು ಬರುತ್ತದೆ ಎಂದು ಹೇಳಿದ್ದಾರೆ. ಉಚ್ಚ ಜನರಾಗಿರತಕ್ಕಂಥ ವ್ಯಕ್ತಿಗಳನ್ನು ಮತ್ತು ಕವಿಗಳನ್ನು ನಾವು ಇವತ್ತಿನದಿವಸ ಕಳೆದು ಕೊಂಡಿದ್ದೇವೆ. ಇದರಿಂದ ಬೀದರ್ ಜಿಲ್ಲೆಗೆ ಮತ್ತು ಕರ್ನಾಟಕ ರಾಜ್ಯಕ್ಕೆ ತುಂಬಲಾರದಷ್ಟು ನಷ್ಟವಾಗಿದೆ. ಇಂಥವರ ಕುಟುಂಬದವರಿಗೆ ಸಂತಾಪ ಸೂಚಿಸಲು ಕರ್ನಾಟಕ ರಾಜ್ಯದ ಘನ ಸರ್ಕಾರದ ಹಿರಿಯ ಸಚಿವರಾಗಿರತಕ್ಕಂಥ ಸನ್ಮಾನ್ಯ ಧರ್ಮಸಿಂಗ್‌ರವರು ಬೀದರ್‌ಗೆ ಬಂದು ಶ್ರೀಯುತರ ಮನೆಗೆ ಹೋಗಿ ಸಂತಾಪ ಸೂಚಿಸಿದರು. ಶ್ರೀಯುತ ಮೊಹಸೀನ್ ಕಮಲ್‌ರವರ ಕುಟುಂಬದವರಿಗೆ ಆಗಿರತಕ್ಕಂಥ ಆಘಾತವನ್ನು ಸಹಿಸಿಕೊಳ್ಳತಕ್ಕಂಥ ಶಕ್ತಿಯನ್ನು ದೇವರು ಕೊಡಲೆಂದು ಪ್ರಾರ್ಥಿಸುತ್ತಾ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ.

†ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, ಗತಿಸಿದ ಎಲ್ಲಾ ಮಹನೀಯರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ದಿವಂಗತ ನಾಗಪ್ಪನವರು ನನಗೆ ಬಹಳ ವರ್ಷಗಳಿಂದ ಬೇಕಾದಂಥವರು, ಮತ್ತು ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಸಜ್ಜನಿಕೆಗೆ ಹೆಸರಾದಂಥ ವ್ಯಕ್ತಿಗಳು. ಅವರ ಅಪಹರಣ ಆದಾಗ ಜನರ ಮತ್ತು ಅವರ ಕುಟುಂಬದವರ ತಳಮಳ ಬಹಳ ಇತ್ತು. ಅವರು ಅಪಹರಣ ಆಗಿ ಹೋಗಿರತಕ್ಕಂಥ ಬಸ್ಸಿನಲ್ಲಿ ವೀರಪ್ಪನ್ ಕರೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ, ಬಸ್ಸಿನಲ್ಲಿ ಇರತಕ್ಕಂಥ ಜನರಿಗೆ ನಾಗಪ್ಪನವರು ಹೇಳಿದ್ದಾರೆ. ತಾವು ಯಾರೂ ಅಶಾಂತಿಯನ್ನುಂಟು ಮಾಡಬೇಡಿ, ನಾನು ಹೇಗಾದರೂ ಮಾಡಿ ವಾಪಸ್ಸು ಬರುತ್ತೇನೆಂದು ಹೇಳಿ ಅಲ್ಲೂ ಸಹ ಅಪಹರಣ ಆದರೂ ಸಹ ತಳಮಳಗೊಳ್ಳದೆ ನಾಗಪ್ಪನವರು ಜನರಿಗೆ ಮನವಿಯನ್ನು ಮಾಡಿಕೊಂಡಿದ್ದಾರೆ. ಅಷ್ಟು ಸಜ್ಜನಿಕೆಯ ವ್ಯಕ್ತಿತ್ವವನ್ನು ಉಳ್ಳತಕ್ಕಂಥ ಮಹಾನುಭಾವರು. ಬಹಳ ವರ್ಷಗಳಿಂದ ಅವರು ನನಗೆ ಗೊತ್ತು. ಯಾವುದೇ ಸಂದರ್ಭದಲ್ಲೂ ಉದ್ರೇಕವಾಗಲಿ ಅಥವಾ ಸೇಡನ್ನು ತೀರಿಸಿಕೊಳ್ಳಬೇಕು ಎನ್ನುವ ಮನೋಭಾವನೆಯಾಗಲಿ ಅವರಲ್ಲಿ ಇರಲಿಲ್ಲ. ಯಾವುದೇ ಒಂದು ಸಮಸ್ಯೆ ಬಂದಾಗ, ಏಕೆ ಗೊಂದಲ ಮಾಡಿಕೊಳ್ಳತಕ್ಕಂಥದ್ದು, ಯಾರೇ ಒಬ್ಬರು ಸೋತರೂ ಸಮಸ್ಯೆ ಬಗೆಹರಿಯುತ್ತದೆ ಎನ್ನತಕ್ಕಂಥ ನಿಲುವು ಅವರಲ್ಲಿ ಸದಾ

ಇತ್ತು. ಬಹುಶಃ ನನಗೆ ಆಶ್ಚರ್ಯವಾಗುತ್ತಿತ್ತು. ರಾಜಕಾರಣಿಗಳಲ್ಲಿ ಬಹುತೇಕವಾಗಿ ಈ ಭಾವನೆ ಇರುವುದು ಬಹಳ ಕಷ್ಟ. ನಮ್ಮಲ್ಲಿ ಅವರ ಬಗ್ಗೆ ಬಹಳ ಗೌರವ, ಏಕೆಂದರೆ ಅವರು ದೈವಭಕ್ತರಾಗಿದ್ದರು, ಮಠಮಾನ್ಯಗಳ ಬಗ್ಗೆ ಗೌರವವನ್ನು ಹೊಂದಿದ್ದರು. ಸಾರ್ವಜನಿಕರ ಜೊತೆಯಲ್ಲಿ ಬಹಳ ಆತ್ಮೀಯ ಬಾಂಧ್ಯವನ್ನು ಇಟ್ಟುಕೊಂಡಿದ್ದರು. ಸರಳ ಭಾಷೆ ಮತ್ತು ಸರಳ ಸ್ವಭಾವದ ವ್ಯಕ್ತಿ, ಯಾರಿಗೂ ಅನ್ಯಾಯವನ್ನು ಮಾಡಿದವರು ಅಲ್ಲ. ಸಾಮಾನ್ಯವಾಗಿ ರಾಜಕಾರಣದಲ್ಲಿ ನಾವು ರಾಜಕೀಯವನ್ನು ಪ್ರವೇಶ ಮಾಡಿದ ಕೂಡಲೇ ಶತ್ರುಗಳು ಬಹಳ ಇರುತ್ತಾರೆ. ಅದು ಈ ಪ್ರಜಾಪ್ರಭುತ್ವದಲ್ಲಿ ಈ ಚುನಾವಣೆಯ ಒಂದು ವಾತಾವರಣದಲ್ಲಿ ಶತ್ರುಗಳು ಬೇಕೋ ಅಥವಾ ಬೇಡವೋ, ಆದರೂ ಅದರಲ್ಲಿ ಉದ್ಭವವಾಗುತ್ತಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿಯೂ ಸಹ ನಾಗಪ್ಪನವರಿಗೆ ಶತ್ರುಗಳು ಎನ್ನುವವರು ಇರಲಿಲ್ಲ. ಆಕಸ್ಮಾತ್ತಾಗಿ ಇದ್ದರೆ ಒಂದು ಅಥವಾ ಎರಡು ಪರ್ಸೆಂಟ್ ಇದ್ದರು. ವೈಯಕ್ತಿಕವಾಗಿ ಅವರು ಯಾರನ್ನೂ ದ್ವೇಷ ಮಾಡುತ್ತಿರಲಿಲ್ಲ, ಅಂತಹ ಒಳ್ಳೆಯ ಸ್ವಭಾವದ ವ್ಯಕ್ತಿ. ಅವರನ್ನು ನರಹಂತಕ ವೀರಪ್ಪನ್ ಅಪಹರಣ ಮಾಡಿದಾಗ ನಮಗೆಲ್ಲರಿಗೂ ಬಹಳ ನೋವು ಆಯಿತು. ಈ ವಿಚಾರದಲ್ಲಿ ಸರ್ಕಾರ ರಾಜಕಾರಣ ಮಾಡದೆ ನಾಗಪ್ಪನವರನ್ನು ಪ್ರಾಮಾಣಿಕತೆಯಿಂದ ಬಿಡುಗಡೆ ಮಾಡಿಸಿಕೊಂಡು ಬರಬೇಕೆಂದು ಎಲ್ಲಾ ಪ್ರಯತ್ನವನ್ನು ನಾವು ಮಾಡಿದೆವು.

(ಗೊಂದಲ)

ನಾನು ಸಂತಾಪ ಸೂಚನೆ ಮೇಲೆ ಮಾತನಾಡುತ್ತಿದ್ದೇನೆ. ನಿಮಗೆ ಮಾನವೀಯತೆ ಎನ್ನುವುದು ಏನಾದರೂ ಇದ್ದರೆ, ದಯಮಾಡಿ ನಾನು ಮಾತನಾಡಿದ ಮೇಲೆ ಮಾತನಾಡಿ. ನಾನು ಗಂಭೀರವಾಗಿ ಸಂತಾಪವನ್ನು ಮಾಡುವಾಗ, ನೀವು ಅದರ ಬಗ್ಗೆ ಏನು ಮಾತನಾಡುವುದು? ನೀವು ಒಬ್ಬರೇ ಏನು? ನಾಗಪ್ಪನವರ ಬಗ್ಗೆ ಕಾಳಜಿ ಇರತಕ್ಕಂಥವರು, ನಮಗೆ ಏನು ಕಾಳಜಿ ಇಲ್ಲವೇನು?

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಅಧ್ಯಕ್ಷರೆ, ಅವರು ಸಂತಾಪ ಸೂಚನೆಯನ್ನು ಮಾಡಲಿ, ಬಿಡಿಸಿಕೊಳ್ಳುವುದು ಬಿಡುವುದು ನಾಳೆ ಚರ್ಚೆಗೆ ಬಂದಾಗ, ನಿಮಗೆ ಎಷ್ಟು ಕಳಕಳಿ ಇದೆ, ಅಷ್ಟೇ ಕಳಕಳಿ ಮಾನ್ಯ ಸಿ. ಗುರುಸ್ವಾಮಿಯವರಿಗೂ ಇದೆ.

(ಗೊಂದಲ)

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಅವರ ಬಗ್ಗೆ ನಮ್ಮ ಸರ್ಕಾರಕ್ಕೆ ಎಷ್ಟು ಕಾಳಜಿ ಮತ್ತು ಎನ್ನುವುದರ ಬಗ್ಗೆ ಎರಡು ಮಾತಿಲ್ಲ ಎನ್ನುವುದನ್ನು ಹೇಳುವುದಕ್ಕೆ ನನಗೆ ಹಕ್ಕಿದೆ. ಸರ್ಕಾರ ಎಲ್ಲ ಪ್ರಯತ್ನವನ್ನು ಮಾಡಿತ್ತು. ಪ್ರಾಮಾಣಿಕವಾಗಿ ಮಾಡಿತ್ತು ಇದಕ್ಕೆ ರಾಜಕೀಯವನ್ನು ಮಿಕ್ಸ್ ಮಾಡಿಲ್ಲ. ಆದರೆ ದುರ್ದೈವ ನಾವು ಅವರನ್ನು ಬಿಡಿಸಿಕೊಂಡು ಬರುವುದಕ್ಕೆ ಆಗಲಿಲ್ಲ. ಅವರು ಅಪಘಾತಕ್ಕೆ ಈಡಾದರು. ಆಯಿತು, ತಾವು ನಾಳೆ ವಿಷಯವನ್ನು ಪ್ರಸ್ತಾಪ ಮಾಡಿ, ಅದಕ್ಕೆ ಉತ್ತರಿಸಲು ನಾವು ಸಿದ್ಧರಿದ್ದೇವೆ, ಸರ್ಕಾರ ಕೂಡ ಸಿದ್ಧವಿದೆ. ನಮಗೆ ಬಹಳ ನೋವಾಗುತ್ತಿದೆ. ಇವರು ಹೇಳಬಹುದು, ಸ್ವಾಮಿ ನಾನು ಯಾರ ಮೇಲೂ ಅಪಾದನೆಯನ್ನು ಮಾಡುತ್ತಿಲ್ಲ, ರಾಜ ಕಾರಣಕ್ಕೋಸ್ಕರ ಯಾರೂ ಈ ಮಾತನ್ನು ಆಡಬಾರದು. ರಾಜಕಾರಣ ಸೇರಿಕೊಳ್ಳಬಾರದು.

ನಾಗಪ್ಪನವರ ಅಪಹರಣ ವಿಚಾರದಲ್ಲಿ, ನಾಗಪ್ಪನವರ ದುರ್ಮರಣದ ವಿಚಾರದಲ್ಲಿ ರಾಜಕರಣವನ್ನು ಸೇರಿಸಿಕೊಳ್ಳಬಾರದು. ಏಕೆಂದರೆ, ನಾನು ಒಬ್ಬ ಅವರಿಗೆ ಆತ್ಮೀಯವಾಗಿ ಹೇಳುತ್ತಿದ್ದೇನೆ. ಮಾನ್ಯ ಭೈರೇಗೌಡರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದರು. ಬಂಡೆಹಳ್ಳಿಗೆ ಹೋದಂಥ ಸಂದರ್ಭದಲ್ಲಿ ಉದ್ರೀಕ್ತವಾದ ಒಂದು ವಾತಾವರಣ ಇತ್ತು. ಆ ಸಂದರ್ಭದಲ್ಲಿ ನಾನು ಮತ್ತು ಮಾನ್ಯ ನಾಗಪ್ಪನವರು ಅಲ್ಲಿಗೆ ಹೋಗಿದ್ದೆವು. ಮಾನ್ಯ ಬೈರೇಗೌಡರು, ಸರ್ಕಾರದ ಪರವಾಗಿ ನನ್ನನ್ನು ಕಳುಹಿಸಿಕೊಟ್ಟಿದ್ದರು. ಅಂತಹ ಸಂದರ್ಭದಲ್ಲಿಯೂ ಮಾನ್ಯ ನಾಗಪ್ಪನವರು ದಯವಿಟ್ಟು ಶಾಂತಿ ಕಾಪಾಡಿ, ಯಾರೂ ಪರಸ್ಪರ ಬೈದಾಡಬೇಡಿ, ಗೊಂದಲವನ್ನು ಉಂಟು ಮಾಡಬೇಡಿ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಮಾನ್ಯ ನಾಗಪ್ಪನವರು ಇವತ್ತು ನಮ್ಮ ಮುಂದೆ ಇಲ್ಲ, ಆದರೆ ಅವರ ಕುಟುಂಬ ಒಂದು ದೊಡ್ಡ ಆಘಾತಕ್ಕೆ ಸಿಲುಕಿದೆ, ಅವರ ಕುಟುಂಬದ ಸಂಬಂಧಿಕರು, ಹಿತೈಷಿಗಳು ಬಹಳ ನೋವನ್ನು ಅನುಭವಿಸುತ್ತಿದ್ದಾರೆ, ಆ ನೋವಿನಲ್ಲಿ ನಾವೂ ಕೂಡ ಪಾಲ್ಗೊಂಡಿದ್ದೇವೆ. ಏಕೆಂದರೆ, ಅವರ ಬಗ್ಗೆ ನಾವು ಎಷ್ಟು ಒಳ್ಳೆಯ ಶಬ್ದಗಳನ್ನು ಉಪಯೋಗಿಸಿದರೂ ಸಾಲದು. ನಾವು ಅವರನ್ನು ಬಿಡಿಸಿ ಕೊಳ್ಳುವ ಪ್ರಯತ್ನಕ್ಕೋಸ್ಕರ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ನಾಗಪ್ಪನವರ ಬಿಡುಗಡೆಗೆ ಮತ್ತು ವೀರಪ್ಪನ್‌ನನ್ನು ಹಿಡಿಯುವುದಕ್ಕೆ ನಾವು ಗಂಭೀರವಾಗಿ ಆಲೋಚನೆ ಮಾಡಿ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಸಹ ಮಾಡಿ, ಕಾರ್ಯಾಚರಣೆಯನ್ನು ಮಾಡಬೇಕು ಎನ್ನುವಂಥ ಸಂದರ್ಭದಲ್ಲಿ, ಕಾರ್ಯತಂತ್ರವನ್ನು ರೂಪಿಸಬೇಕು ಎನ್ನುವಂಥ ಸಂದರ್ಭದಲ್ಲಿ, ಪಾಪ, ನಮ್ಮಿಂದ ನಾಗಪ್ಪನವರು ಆಗಲಿದರು. ಆದರ ಅವಕಾಶ ಕೂಡ ನಮಗೆ ಸರಿಯಾಗಿ ಸಿಗಲಿಲ್ಲ. ಮತ್ತೆ ಅಂತ್ಯ ಸಂಸ್ಕಾರಕ್ಕೆ ನಾವು ಸರ್ಕಾರದ ಪರವಾಗಿ ಹೋಗಿ ಗೌರವನ್ನು ಸೂಚಿಸಬೇಕು ಎಂದು ಸರ್ಕಾರದ ಪರವಾಗಿ ಹೋದಾಗಲೂ ಸಹ, ಅವರಿಗೆ ನಾವು ಗೌರವವನ್ನು ಸೂಚಿಸಲಿಕ್ಕೆ ಆಗಲಿಲ್ಲ. ಅನೇಕ ಅಡೆತಡೆಗಳಿಂದ ಇದೊಂದು ಅವಕಾಶವನ್ನು ನಾವು ಕಳೆದುಕೊಂಡು ಬಿಟ್ಟಿದ್ದೇವೆ. ಆದರೆ ಇವತ್ತು ನಾಗಪ್ಪನವರು ನಮ್ಮನ್ನು ಆಗಲಿದ್ದಾರೆ, ಅವರ ಕುಟುಂಬಕ್ಕೆ ಚಿರಶಾಂತಿಯನ್ನು ನೀಡಲಿ, ಭಗವಂತ ಅವರಿಗೆಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ನಾನು ಹಾರೈಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಸನ್ಮಾನ್ಯ ಸಭಾಧ್ಯಕ್ಷರೆ, "ಆಯಿಂವಿತ್ತಮ್ ಕರ್ಮಂಚಿ," ಅಂದರೆ, ಆಯಸ್ಸು ವಿದ್ಯೆ, ಕೆಲಸ, ಹಣ ಅಧಿಕಾರ, ಇದನ್ನೂ ಕೂಡ ತಾಯಿಯ ಗರ್ಭದಲ್ಲಿ ಬರೆದಿರುತ್ತದೆ. ಆದರೆ ನಾಗಪ್ಪನವರ ಸಾವು ಕಾಡಿನಲ್ಲಿ ಬರೆದಿತ್ತು.

ಸಾವು ಮತ್ತು ಪ್ರಕೃತಿ, ಎಂದೂ ತನ್ನ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಅರಸನಾಗಲಿ, ಧನಿಕನಾಗಲಿ, ತಿರುಕನಾಗಲಿ, ನಾನಾಗಲಿ, ನೀವಾಗಲಿ ಎಲ್ಲರೂ ಇಲ್ಲಿಂದ ಹೋಗಲೇಬೇಕು. ಹೊಸಬರು ಬರುವುದಾದರೆ, ಹೇಗೆಂಬ ಒಂದು ಮಂತ್ರ ಇದೆ. ಆದರೆ ನಾಗಪ್ಪನವರ ಸಾವು ಆದದ್ದು ನಿರ್ಲಕ್ಷ್ಯದಿಂದ. ಏಕೆಂದರೆ, ನಾಗಪ್ಪನವರು ಕಳೆದ ಸಲ ಇಲ್ಲಿದ್ದರು, ನಾವೂ ಇದ್ದೆವು. ನಾಗಪ್ಪನವರು ಎಂದೂ ಬುಸುಗುಟ್ಟುತ್ತಿರಲಿಲ್ಲ, ಆ ಹೆಸರಿಗೆ ತಕ್ಕ ನಾಗಪ್ಪನವರಾಗಿರಲಿಲ್ಲ. ಅವರು ಬುಸುಗುಟ್ಟಿದರೆ

ಸಾಯುತ್ತಿರಲಿಲ್ಲ. ಆದರೆ ಮನುಷ್ಯನಿಗೆ 64 ಕೋಟಿ ಜೀವರಾಶಿಗಳಲ್ಲಿ ಶ್ರೇಷ್ಠವಾದಂಥ ಮಾನವ ಜನ್ಮ ಮತ್ತೆ ಬರುವುದಿಲ್ಲ. ಆ ಮಾನವ ಜನ್ಮಕ್ಕೆ ಫಲಕಾರಿಯಾಗುವಂಥ ದೃಷ್ಟಿಯಲ್ಲಿ ಅವನು ಮಾಡಿರತಕ್ಕಂಥ ಸೇವೆ ಎಂಬ ಬೀಜವನ್ನಿಟ್ಟು ಕೊಂಡು ತ್ಯಾಗ ಎನ್ನತಕ್ಕಂಥ ನೀರನ್ನು ಎರೆದು ಹೆಮ್ಮರವಾಗಿ ಬೆಳೆದು ಸಮಾಜದ ಎಲ್ಲಾ ವರ್ಗದ ಜನರ ಹಿತವನ್ನು ಕಾಪಾಡತಕ್ಕಂಥ ವ್ಯಕ್ತಿ ಸಮಾಜಕ್ಕೆ ಶಕ್ತಿಯಾಗಿದ್ದರು. ಆ ಶಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಆ ಶಕ್ತಿ ಮತ್ತೆ ಬರಬಾರದು, ಪುನರಪಿ ಜನನಂ, ಪುನರಪಿ ಮರಣಂ, ಇಲ್ಲ. ಒಂದು ಸಾರಿ ಹುಟ್ಟಿದ ಮೇಲೆ ಮತ್ತೆ ನಾವು ಹುಟ್ಟುವುದಿಲ್ಲ. ಇವೆಲ್ಲಾ ಸುಳ್ಳು, ಅದರಿಂದಾಗಿ ನಾವೆಲ್ಲರೂ ಹುಟ್ಟುವ ಮೊದಲೇ ಸಮಾಜದ ಋಣವನ್ನು ತೀರಿಸಬೇಕು, ಸಮಾಜದ ಸಾಲವನ್ನು ತೀರಿಸಬೇಕು. ಆ ಸಾಲವನ್ನು ತೀರಿಸುವ ದಿಕ್ಕಿನಲ್ಲಿ ಕೈಂಕರ್ಯ ಕಾರ್ಯವನ್ನು ಮಾಡಿದ್ದಾರೆ. ಮನುಷ್ಯ ಜನ್ಮದಲ್ಲಿ ಬೇಕಾಗಿರುವಂಥದ್ದು ಪಾವಿತ್ರ್ಯತೆ ಎನ್ನತಕ್ಕಂಥದ್ದು, ನಾನು ಇವತ್ತು ಸಾಯುತ್ತೇನೋ ನಾಳೇ ಸಾಯುತ್ತೇನೋ ಗೊತ್ತಿಲ್ಲ. ಎಲ್ಲರೂ ಕೂಡ ಸಾಯಲೇಬೇಕು, ಇಲ್ಲಿವರೆಲ್ಲರೂ ಆದಮೇಲೆ ಹೊಸಬರು ವಿಧಾನಸೌಧಕ್ಕೆ ಬರಲೇಬೇಕು. ಆದರೆ ನಮ್ಮ ಸಾವಿನ ಹಿಂದೆ ಸಂಚಕಾರಗಳಿರುತ್ತವೆ. ಪ್ರತಿಯೊಬ್ಬ ಮನುಷ್ಯನ ಸಾವಿನ ಹಿಂದೆ ಸಂಚಕಾರಗಳಿರುತ್ತವೆ, ಶ್ರೀ ನಾಗಪ್ಪನವರ ಸಾವಿನಲ್ಲಿ ಸಂಚಕಾರವೇ ಕಾರಣ ಎನ್ನತಕ್ಕಂಥದ್ದನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅವರು ಸಾಯಬಾರದಾಗಿತ್ತು, ಶ್ರೀ ಎಸ್.ಎಂ. ಕೃಷ್ಣರವರು ಇವತ್ತು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ, ಮುಂದೆ ನೀವಾಗಬಹುದು, ಅಥವಾ ನಾವಾಗಬಹುದು, ಇಲ್ಲಿರುವವರಲ್ಲಿ ಯಾರಾದರೂ ಕೂಡ ಆಗಬಹುದು. ಆದರೆ ಮನುಷ್ಯನಿಗೆ

"ಬರುವರಿಬ್ಬರ ಜೊತೆಗೆ ಪಾಪಪುಣ್ಯ, ಕರೆಯದೆ
ಬರುವರಿಬ್ಬರು, ಮುಪ್ಪುಸಾವು ಬಿಡದೆ ಬಂದಿಸುವರಿಬ್ಬರು
ಬೃಹತ್ ಗೃಹಿಣಿ ಶಾಶ್ವತವಾಗಿ ನಿಲ್ಲುವರಿದ್ದರಯ್ಯ
ದಾನಧರ್ಮ, ಆ ಧರ್ಮದ ಪ್ರತೀಕವಾಗಿದ್ದರು - ಶ್ರೀ ನಾಗಪ್ಪನವರು"

ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಬಿ.ಎನ್. ಬಚ್ಚೇಗೌಡ : ಶ್ರೀ ಎಸ್.ಎಂ. ಕೃಷ್ಣರವರು ಏನಾಗಬೇಕು ಹೇಳಿ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಕೃಷ್ಣರವರ ಹಣೆಬರಹವನ್ನು ಯಾರು ಕಂಡಿದ್ದಾರೆ ಹೇಳಿ? ಕೃಷ್ಣರವರು ಪ್ರಧಾನಮಂತ್ರಿಯಾಗುತ್ತಾರೋ ಇನ್ನು ಯಾವ ಮೇಲ್ಮಟ್ಟಕ್ಕೆ ಹೋಗುತ್ತಾರೋ ಎನ್ನುವುದು ಯಾರಿಗೂ ಗೊತ್ತಿಲ್ಲ. ಅವರೆಷ್ಟು ಬಲವಂತರು, ಇವರೆಷ್ಟು ಹೆಸರುವಂತರು, ಇವರೆಷ್ಟು ಧನವಂತರು ಎನ್ನುವಂತಹ ಕೊರಗಿನಲ್ಲಿ ಭವಿಕ ನಿನಗೆಷ್ಟು ತಿಳಯದೆ ಕೊರಗುವುದು ಶಿವನಿಗೆ ಕೃತಜ್ಞತೆಯೇ ಮಂಕುತಿಮ್ಮ ಎಂದು ಡಿವಿಜಿಯವರು ಹೇಳಿದ್ದಾರೆ. ಯೋಗಿ ತಂದದದ್ದು ಯೋಗಿಗೆ ಜೋಗಿ ತಂದದ್ದು ಜೋಗಿಗೆ, ನಾನು ತಂದದ್ದು ನನಗೆ ನೀನು ತಂದದ್ದು ನಿನಗೆ, ಎಲ್ಲವೂ ಅವರ ಹಣೆಬರಹದ ಮೇಲೆ ಹೋಗುತ್ತದೆ. ಆದರೆ ಇಂತಹ ಸಾವು, ಅವರಿಗೆ

ದುರ್ಮರಣ ಬರಬಾರದಾಗಿತ್ತು. ಈ ಜೀವನವೆಂಬ ಸಮುದ್ರದಲ್ಲಿ ಮನುಷ್ಯನಿಗೆ ಬರದೆ ಇರತ್ತಂಕಥದ್ದು ಬೇಕಾದಷ್ಟು ಬರುತ್ತದೆ.

"ಎಚ್ಚರವಿರಬೇಕು ನಡೆನುಡಿಯಲ್ಲಿ
ಮಚ್ಚರವಿರಬೇಕು ಭವಸಂಸಾರದಲಿ
ಉಚ್ಚನಾಗಿರಬೇಕು ಜನರ ಕಣ್ಣಿನಲ್ಲಿ
ಮನಸ್ಸು ಅಚ್ಚುವೊತ್ತಿದಂತಿರಬೇಕು
ಕಾಯಕಲ್ಪದಲ್ಲಿ ಎಂದು ಶರಣರು ಹೇಳಿದ್ದಾರೆ.

ಅಂತಹ ಕೆಲಸವನ್ನು ಅವರು ಮಾಡಿದ್ದಾರೆ. ಜೀವಸ್ಮರಣಗಳಲ್ಲಿ

"ಜನನವೆಂಬ ಮೂರಕ್ಷರದಲ್ಲಿ ಜನಿಸಿ,
ಜೀವನವೆಂಬ ಮೂರಕ್ಷರದಲ್ಲಿ ಜೀವಿಸಿ,
ಮಾನವರೆಂಬ ಮೂರಕ್ಷರ ನಿನಗೆ,
ಮರಣ ಎಂಬ ಮೂರಕ್ಷರ ಬಂದಾಗ,
ಕೊಡುಗೆ ಎಂಬ ಮೂರಕ್ಷರದ ಕೀರ್ತಿಯನ್ನು
ಪಡೆದಾಗ ಮಾತ್ರ ಆ ವ್ಯಕ್ತಿ ಸಮಾಜಕ್ಕೆ ಶಕ್ತಿ
ಯಾಗುತ್ತಾನೆಂಬ ಮಾತನ್ನು ಕೂಡ
ಸ್ಪಷ್ಟವಾಗಿ ಹೇಳುತ್ತೇನೆ.

ಈ ಮನುಷ್ಯನ ಜೀವನದಲ್ಲಿ ಬೇಕಾದಷ್ಟು ಇದೆ, ನಾವೆಲ್ಲರೂ ಕೂಡ ಇಷ್ಟೆಲ್ಲಾ ಮಾತನಾಡುತ್ತೇವೆ, ಅವರು ಚೆನ್ನಾಗಿದ್ದಾಗ ಚೆನ್ನ ಸರಿಯಾಗಿದ್ದರೆ ಸರಿ ಪರಿಪರಿಯಾಗಿ ನೆಂಟರು, ಗೌಡನ ಮನೆಯ ನಾಯಿಯು ಸತ್ತುಹೋದಾಗ ಊರಿನಲ್ಲಿವರೆಲ್ಲಿರೂ ಹೋದರಂತೆ, ಆದರೆ ಗೌಡ ಸತ್ತು ಹೋದಾಗ ಯಾರೂ ಹೋಗಲಿಲ್ಲ. ಹಾಗೆ, ಈ ಮಾನವ ಜನ್ಮ ಅಂಥದ್ದು.

"ಬಾಳೊಂದು ಮಂದಾರ, ಮಾತೊಂದು ಬಂಗಾರ
ನಡತೆಯೊಂದು ಶೃಂಗಾರ ಆದಾಗ ಹೃದಯ ಸದಾ
ಬೃಹದಾಕಾರ"

ಯಾರ ಸಾವಿನ ಅಂಚಿನಲ್ಲಿಯೂ ಕೂಡ ಯಾರೂ ಇಲ್ಲ. ಆದರೆ ಸಾಯುವುದು ಗ್ಯಾರಂಟಿ. ಆದರೆ ಇಂತಹ ದುರ್ಮರಣ ಬರ ಬಾರದಾಗಿತ್ತು ಎನ್ನುವಂತಹ ಮಾತನ್ನು ಹೇಳುತ್ತಾ, ಇನ್ನು ಪತ್ರಿಕಾರಂಗದ ಭೀಷ್ಮರ ಸಾವು ಆಗಿದೆ. ಸುಮಾರು ಅನೇಕ ಇತಿಹಾಸ ಪುಟಗಳಲ್ಲಿ ಇವರೆಲ್ಲರೂ ಕೂಡ ಸೇರಿಹೋಗಿದ್ದಾರೆ. ನಾಳೆಯ ದಿವಸ ನಮ್ಮದೂ ಸೇರಬಹುದು, ಆದರೆ ನಾವು

ಎಚ್ಚರಿಕೆಯಿಂದರಬೇಕು, ಮನುಷ್ಯ ಆ ಎಚ್ಚರಿಕೆಯಿಂದ ಇದ್ದಾಗ ಮಾತ್ರ ಮನುಷ್ಯನ ಜನ್ಮ ಸಾರ್ಥಕವಾಗುತ್ತದೆ, ಆದರೆ ಶ್ರೀಯುತರಾದ ನಾಗಪ್ಪನವರ ನಿಗೂಢ ಸಾವು, ಬೆಳಕಿಗೆ ಬರಬೇಕು, ಸಿಓಡಿ ತನಿಖೆಯಾಗಬೇಕು, ಸಿಬಿಐ ತನಿಖೆಯಾಗಬೇಕು ಇದನ್ನು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ಇದು ಆಗದೇಹೋದರೆ ನಾಳೆ ನಾವು ಸದನದ ಬಾವಿಯಲ್ಲಿ ಮಲಗುತ್ತೇವೆ, ವೀರಪ್ಪನ್ ಬೇಕಾದರೆ ನನ್ನನ್ನು ಕರೆದುಕೊಂಡು ಹೋಗಿ ಕೊಂದುಬಿಡಲಿ. ಈ ದಿನ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ನಿಮ್ಮ ಸಂತಾಪ ಸೂಚಕ ಸಭೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೆ, ತಾವು ಸಂತಾಪಸೂಚಕ ರೂಪದಲ್ಲಿ ತಂದಿರತಕ್ಕಂತಹ ಈ ಒಂದು ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಸನ್ಮಾನ್ಯ ಎ.ಕೆ. ಅನಂತಕೃಷ್ಣರವರು, ಶ್ರೀ ಜೆ.ಡಿ. ಸೋಮಪ್ಪನವರು, ಶ್ರೀ ಜಿ. ಶಿವಪ್ಪನವರು, ಶ್ರೀ ಮೊಹಸೀನ್ ಕಮಾಲ್‌ರವರು, ಶ್ರೀ ಡಿ. ಪುಟ್ಟೇಗೌಡರು, ಶ್ರೀಮತಿ ಅನ್ನಪೂರ್ಣದೇವಿಯವರು ಹಾಗೆಯೇ ಪತ್ರಿಕಾರಂಗದಲ್ಲಿ ದಿಗ್ವಿಜಯಿಯಾಗಿ ಮೈಸೂರಿನ ಹಿರಿಯ ಪತ್ರಕರ್ತರಾದಂತಹ ತಾತಯ್ಯನವರು ಅಂದರೆ ವೆಂಕಟಕೃಷ್ಣಯ್ಯನವರ ಶಿಷ್ಯರಾಗಿ ಸಾಧ್ವಿಪತ್ರಿಕೆಯ ಸಂಪಾದಕರು ಅಗರಂ ರಂಗಯ್ಯನವರ ಶಿಷ್ಯರಾಗಿ ಬೆಳೆದಂತಹ ಶ್ರೀಯುತ. ಕೆ. ಶಾಮರಾವ್‌ರವರು ಅಪರೂಪದ ಒಬ್ಬ ಪತ್ರಿಕೋದ್ಯಮಿಯಾಗಿ ಬಹಳ ಕಷ್ಟ ಕಾಲದಲ್ಲಿಯೂ ಕೂಡ ಪತ್ರಿಕಾಧರ್ಮವನ್ನು ಉಳಿಸಿದಂತಹ ಒಬ್ಬ ಮಹಾನ್ ವ್ಯಕ್ತಿಯಾಗಿದ್ದಾರೆ. ಇವರೆಲ್ಲರೂ ಕೂಡ ಪೂರ್ಣ ಜೀವನವನ್ನು ಕಳೆದು ತಮ್ಮ ಜೀವನದ ಸಾರ್ಥಕತೆಯನ್ನು ಕಂಡು ಆ ಪರಮಾತ್ಮನ ಕರೆಗೆ ಬಂದು ಹೋದಂತಹವರು. ಇವರೆಲ್ಲರಿಗೂ ಕೂಡ ನಾವು ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇವೆ. ಹಾಗೆಯೇ ಸಂತಾಪ ಸೂಚಕ ಪತ್ರದಲ್ಲಿ ತಾವು ತಿಳಿಸಿರುವಂತಹ ರೀತಿಯಲ್ಲಿಯೇ ಸನ್ಮಾನ್ಯ ನಾಗಪ್ಪನವರ ಸಾವು ಈ ನಾಡಿನ ಜನರ ಮನ ಕೆದಕಿದೆ, ಅಘಾತವನ್ನುಂಟು ಮಾಡಿದೆ, ಎನ್ನುವಂತಹ ಬಹಳ ಅಪರೂಪವಾದಂತಹ ಸತ್ಯವಾದಂತಹ ಅಂಶವನ್ನು ತಮ್ಮ ಪತ್ರದ ಮೂಲಕವಾಗಿ ತಾವು ತಿಳಿಸಿದ್ದೀರಿ. ಕಾರಣವೇನೆಂದರೆ, ಪೂರ್ಣ ಜೀವನವನ್ನು ನಡೆಸಿದಂತಹ ಅವರು ಶಿವನ ಕರೆಗೆ ಒಗೊಟ್ಟು ಬಾಕಿಯವರು ಹೋದರೆ, ಈ ಒಂದು ಆತ್ಮವನ್ನು ನಾವು ನಮ್ಮ ಕಣ್ಮುಂದೆಯೇ ಕಳೆದು ಕೊಂಡಿದ್ದೇವೆಂಬ ದುಃಖ ಎಲ್ಲರ ಮನಸ್ಸನ್ನು ಕಾಡುವಂತಹ ಪರಿಸ್ಥಿತಿ ಉಂಟಾಗಿದೆ. ಸನ್ಮಾನ್ಯ ನಾಗಪ್ಪನವರು ಅತಿ ಸಂಭಾವಿತರು, ಮೌಲ್ಯಾಧಾರಿತವಾದಂತಹ ರಾಜಕಾರಣವನ್ನು ಬಾಯಿಯಲ್ಲಿ ಆಡದೆಯೇ ತಮ್ಮ ಜೀವನದಲ್ಲಿ ರೂಢಿಸಿಕೊಂಡಂತಹ ಒಬ್ಬ ಮಹಾನ್ ವ್ಯಕ್ತಿಯಾಗಿದ್ದಾರೆ. ಅವರು ಸಾವಿನ ನಂತರದಲ್ಲಿ ಕಾಡಿನಲ್ಲಿ ಸಿಕ್ಕಿರುವಂತಹ ಅವರ ಡೈರಿಯಲ್ಲಿ 106 ದಿವಸಗಳ ಕಾಲ ಅವರು ಪರಿತಪಿಸಿರುವಂತಹ ಕಷ್ಟವನ್ನು ಕೇವಲ ಎರಡೇ ಎರಡು ಪದಗಳಲ್ಲಿ ನಾವು ನೆನಪಿಸಿಕೊಂಡರೆ ಅವರು ನೂರಾರು ದಿವಸಗಳ ಕಾಲ ಕಾಡಿನಲ್ಲಿ ಹೇಗೆ ಇದ್ದರು ಎಂಬ ಭಯವಾಗುತ್ತದೆ ನಮಗೆ. ಒಂದು ಕಡೆ ಅವರು "ಓಂ ನಮಃ ಶಿವಾಯ" ಎಂಬ ಪದಗಳನ್ನು ಬರೆಯುತ್ತಾ, ಆ ಶಿವನ ನೆನಪನ್ನು ಮಾಡಿಕೊಳ್ಳುತ್ತಾ ಜೀವನವನ್ನು ಕಳೆದರೆ ಮತ್ತೊಂದು ಕಡೆ ಒಬ್ಬ ಮಂತ್ರಿಯಾಗಿ ಮೂರು ಬಾರಿ ಅಲ್ಲಿ ಶಾಸಕರಾಗಿ, ಒಂದು ಬಾರಿ ಮಂತ್ರಿಗಳಾಗಿ ದ್ದಂತಹವರು

ತಮ್ಮ ಮಗಳು ಹಾಗೂ ಮೊಮ್ಮಗುವನ್ನು ಅವರ ಗಂಡನ ಮನೆಗೆ ಕಳುಹಿಸಿಕೊಡ ಬೇಕಾದಾಗ ಮನೆಯಲ್ಲಿ ಹಣವಿಲ್ಲವೆಂದು ಹೇಳಿ ತಾವು ಬೆಳೆದಿದ್ದಂತಹ ಅರಿಶಿಣವನ್ನು ಮಾರು ಎಂದು ಹೇಳಿ ತಮ್ಮ ಧರ್ಮಪತ್ನಿಯವರಿಗೆ ಒಂದು ಪತ್ರವನ್ನು ಬರೆಯುವಂತಹ ಒಂದು ಒಕ್ಕಣೆಯನ್ನು ನಾವು ನೋಡಿದಾಗ ವಿಶೇಷವಾಗಿ ಈ ಸದನದಲ್ಲಿ ಕುಳಿತಿರುವಂತಹ ನಾವೆಲ್ಲರೂ ಕೂಡ ಆತ್ಮಶೋಧನೆಯನ್ನು ಮಾಡಿಕೊಳ್ಳಬೇಕಾಗುವಂತಹ ಒಂದು ಪರಿಸ್ಥಿತಿ ಇವತ್ತು ಇದೆ ಎಂದು ನಾನು ಅಂದುಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರು, ನಾಗಪ್ಪನವರು ಕಾಡಿನಲ್ಲಿ ಇದ್ದಂತಹ ಸಂದರ್ಭದಲ್ಲಿ ಈ ಸದನವನ್ನು ಕರೆದು ವಿಶೇಷವಾಗಿ ಅವರನ್ನು ಬಿಡುಗಡೆ ಮಾಡುವುದಕ್ಕೋಸ್ಕರವಾಗಿ ಬೇಕಾದಂತಹ ತಂತ್ರಗಳನ್ನು ರೂಪಿಸುವುದಕ್ಕಾಗಿ ಸದನವನ್ನು ಕರೆಯುತ್ತೀರಿ ಎಂಬ ನಂಬಿಕೆ, ವಿಶ್ವಾಸ, ನಮ್ಮ ಮುಂದೆ ಇತ್ತು. ಇಡೀ ರಾಜ್ಯದ ಜನರು ಇದನ್ನು ನಿರೀಕ್ಷಣೆಯನ್ನು ಮಾಡುತ್ತಿದ್ದರು. ಆದರೆ ಇವತ್ತು ತಾವು ಸದನವನ್ನು ಕರೆದು ಅವರನ್ನು ಕಳೆದುಕೊಂಡಂತಹ ನಾವು ಔಪಚಾರಿಕವಾಗಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವಂತಹ ಈ ಒಂದು ಸಭೆ ಏನಿದೆ, ಇದು ಎಲ್ಲರ ಮನಸ್ಸಿನಲ್ಲಿ ದುಗುಡವನ್ನು ತರುವಂತಹ ಈ ಒಂದು ಶಾಂತಿಯ ಸಭೆಯಾಗಿದೆ. ಸನ್ಮಾನ್ಯ ಅಧ್ಯಕ್ಷರೆ, ಮೊದಲು ನನ್ನಿಂದ ಹೋಗುವಂಥದ್ದು ತಮ್ಮ ಆತ್ಮವೂ ಕೂಡ ಇಲ್ಲಿ ಕುಳಿತಿರುವಂತಹ ನೂರಾರು ಆತ್ಮಗಳೂ ಕೂಡ ಒಂದು ಸಲ ಚಿಂತನೆಯನ್ನು ಮಾಡಬೇಕಾಗಿದೆ. ಆ ನಮ್ಮನ್ನು ಕಳೆದುಕೊಂಡು ಹೋದಂತಹ ಆ ಆತ್ಮವನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ನಾವು ಯಾವ ರೀತಿಯಾದಂತಹ ಪ್ರಯತ್ನವನ್ನು ಮಾಡಿದ್ದೇವೆ ಎನ್ನುವಂತಹದ್ದನ್ನು ಬಾಯಿಯಲ್ಲಿ ಹೇಳದೆಯೇ ನಮ್ಮ ನಮ್ಮ ಆತ್ಮವನ್ನು ಮುಟ್ಟಿ ನೋಡಿಕೊಂಡಾಗ ನಮ್ಮೆಲ್ಲರಿಗೂ ಕೂಡ ಈ ರೂಪದಲ್ಲಿಯೂ ನಾವು ಸಾಂತ್ವನವನ್ನು ಹೇಳುವಂತಹದನ್ನು ಅಥವಾ ಚಿರಶಾಂತಿಯನ್ನು ಕೋರುವಂತಹ ನೈತಿಕತೆ ನಮ್ಮಲ್ಲಿ ಎಲ್ಲೋ ಇಲ್ಲವೆನ್ನುವಂತಹ ಭಯ ನಮ್ಮ ಮನಸ್ಸಿನಲ್ಲಿ ಕಾಡುತ್ತಿದೆ. ಈ ದೃಷ್ಟಿಯಲ್ಲಿ ನಾವು ಮೊದಲೇ ಹೇಳಿದ ಹಾಗೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವಂತಹ ಇದು ಒಂದು ನೋವಿನ ವಿಚಾರ ಸುಮಾರು 8 ವರ್ಷಗಳ ಕಾಲ ಶಾಸಕರಾಗಿ ಸಂತಾಪಸೂಚಕ ನಿರ್ಣಯಗಳನ್ನು ಮಂದಿಗೆ ಇಲ್ಲಿ ನಾವು ನೂರಾರು ಜನಕ್ಕೆ ಶಾಂತಿಯನ್ನು ಕೋರಿದ್ದೇವೆ. ಆದರೆ ಅಪರೂಪವಾಗಿ ಇಂತಹ ಒಬ್ಬ ವ್ಯಕ್ತಿಗೆ ಸಾಂತ್ವನ ಹೇಳುವಂತಹದ್ದು ಎಲ್ಲರ ಮನಸ್ಸಿನಲ್ಲಿ ದುಗುಡವನ್ನು ತರುವುದರ ಜೊತೆಗೆ, ಶ್ರೀ ಗುರುಸ್ವಾಮಿಯಂತಹವರೂ ಕೂಡ ಇಂತಹ ಒಂದು ಸಭೆಯಲ್ಲಿಯೂ ಅವರ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಸದನದ ಬಾವಿಯಲ್ಲಿದ್ದಾರೆ. ಎಲ್ಲರ ಮನಸ್ಸಿನಲ್ಲಿ ಆಘಾತವನ್ನಿಟ್ಟುಕೊಂಡು ನಾವು ಬಹಳ ನೋವಿನಿಂದ ಈ ಒಂದು ಸಭೆಯಲ್ಲಿ ಮಾತನಾಡಬೇಕಾದಂತಹ ಪರಿಸ್ಥಿತಿ ಬಂದಿದೆ. ಅದರಲ್ಲೂ ವಿಶೇಷವಾಗಿ ರಾಜ್ಯದ ಹಾಗೂ ರಾಜ್ಯದ ಜನತೆಯ ಅನಿಸಿಕೆ ಏನಿದೆ ಅಂದರೆ ನಮ್ಮ ಈ ಸದನ ಅವರಿಗೆ ನಿಜವಾದಂತಹ ಶ್ರದ್ಧಾಂಜಲಿಯನ್ನು ಕೊಡುವುದಕ್ಕೆ ಸಾಧ್ಯವಾಗುವುಲ್ಲವೇನೋ ಎನ್ನುವಂತಹ ಮನಸ್ಸಿನ ನೋವಿದೆ. ನಾವು ಯಾರೂ ಕೂಡ ಅವರ ಕುಟುಂಬಕ್ಕೆ 106 ದಿವಸಗಳ ಕಾಲ ಆದಂತಹ ಆ ನೋವನ್ನು ನಿವಾರಿಸಲು ಅಧಿಕಾರವಿದ್ದು, ಅಧಿಕಾರವನ್ನು ಅನುಭವಿಸುತ್ತಾ ಇದ್ದು ಸಾಧ್ಯವಾಗಲಿಲ್ಲ. ಒಂದೊಂದು ದಿವನ್ನು ಕಳೆಯುವುದು ಕಷ್ಟವಾಗಿರುವಂತಹ ಪರಿಸ್ಥಿತಿಯಲ್ಲಿ 106 ದಿವಸಗಳ ಕಾಲ

ಏಕಾಂಗಿಯಾಗಿ ಅಂತಹವರ ತೆಕ್ಕೆಯಲ್ಲಿ ಆ ನೋವನ್ನು ಅನುಭವಿಸಿದಂತಹ ಕ್ಷಣವನ್ನು ನಾವು ನೆನಪಿಸಿಕೊಂಡರೆ ಈ ಶ್ರದ್ಧಾಂಜಲಿಯ ಸಭೆಗಿಂತಲೂ ಕೂಡ ಅವರ ಆತ್ಮಕ್ಕೆ ಶಾಂತಿಯನ್ನು ಸಿಗುವಂತಹ ಕೆಲಸವನ್ನು ನಾವು ಯಾರಾದರೂ ಮಾಡಿದರೆ ಮಾತ್ರ ಅವರ ಆತ್ಮಕ್ಕೆ ನಿಜವಾಗಿ ಶಾಂತಿಯು ಸಿಗಬಹುದು, ಇಡೀ ರಾಜ್ಯ, ದೇಶ, ಎಲ್ಲರ ವಿಚಾರದಲ್ಲಿಯೂ ಕೂಡ ಒಂದು ಆಘಾತವನ್ನು ತಂದಿರತಕ್ಕಂತಹ ವೀರಪ್ಪನ್‌ನ ಅಂತಿಮವನ್ನು ಕಂಡಾಗ ಮಾತ್ರ ಆ ಆತ್ಮಕ್ಕೆ ಶಾಂತಿಯು ಸಿಗುತ್ತದೆ ಎನ್ನುವುದನ್ನು ಹೇಳುತ್ತಾ, ಆ ಪರಮಾತ್ಮನು ಅವರ ಕುಟುಂಬಕ್ಕೆ ವಿಶೇಷವಾಗಿ ಅವರ ಧರ್ಮಪತ್ನಿಯವರಿಗೆ, ಪುತ್ರರಿಗೆ ಈ ಒಂದು ನೋವಿನಿಂದ ಹೊರಗಡೆ ಬರುವುದಕ್ಕೆ ಒಂದು ಶಕ್ತಿಯನ್ನು ಕೊಡಲೆಂದು ಹೇಳುತ್ತಾ ನಾನು ಆ ಪರಮಾತ್ಮನಲ್ಲಿ ಬೇಡಿಕೊಳ್ಳುತ್ತಾ, ತಾವು ತಂದಿರತಕ್ಕಂತಹ ಈ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನವು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು.)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 12 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 24ನೇ ಡಿಸೆಂಬರ್ ಮಾಹೆ 2002ರಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು.)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)